ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಮಾರ್ಚ್ 02, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 290 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736 91642 99999




# ಆರಂಭದಲ್ಲೇ ಬೇಸಿಗೆ ಬಿರುಸು ಜೋರು

ನವದೆಹಲಿ, ಮಾ. 1 - ಈ ಬಾರಿ ಬೇಸಿಗೆಯ ಆರಂಭದಲ್ಲೇ ಬಿಸಿಲ ಪ್ರಕೋಪ ಹೆಚ್ಚಾಗಿರಲಿದೆ. ಎಲ್ ನೀನೋ ಪರಿಸ್ಥಿತಿ ಕಾರಣದಿಂದಾಗಿ ಬೇಸಿಗೆ ಕಾಲದ ಉದ್ದಕ್ಕೂ ತಾಪಮಾನ ವಾಡಿಕೆಗಿಂತ ಹೆಚ್ಚಾಗಿರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಈಶಾನ್ಯ ಪ್ರಸ್ಥಭೂಮಿ, ತೆಲಂಗಾಣ, ಆಂಧ್ರ ಪ್ರದೇಶ ಹಾಗೂ ಉತ್ತರ ಕರ್ನಾಟಕದ ಒಳನಾಡಿನಲ್ಲಿ ಹೆಚ್ಚಿನ ಬಿಸಿ ಗಾಳಿಯ ದಿನಗಳು ಬರಲಿವೆ ಎಂದೂ ಇಲಾಖೆ ತಿಳಿಸಿದೆ.

ಮಹಾರಾಷ್ಟ್ರ ಹಾಗೂ ಒಡಿಶಾಗಳ ಹಲವಾರು ಭಾಗಗಳಲ್ಲೂ ಬಿಸಿ ಗಾಳಿಯ ಪ್ರಕೋಪ ಇರಲಿದೆ.

ಮಾರ್ಚ್ ತಿಂಗಳಲ್ಲಿ ದೀರ್ಘಾವಧಿ ಸರಾಸರಿಗಿಂತ ಹೆಚ್ಚಿನ ಪ್ರಮಾಣದ ಮಳೆ ಸುರಿಯಲಿದೆ ಎಂದೂ ಇಲಾಖೆ ಹೇಳಿದೆ. ದೀರ್ಘಾವಧಿ ಸರಾಸರಿ 29.9 ಮಿ.ಮೀ. ಆಗಿದ್ದು, ಇದಕ್ಕಿಂತ ಶೇ.117ರಷ್ಟು ಹೆಚ್ಚು ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆಯ ಮುನ್ಸೂಚನೆಯಲ್ಲಿ ಹೇಳಲಾಗಿದೆ.

ಮಾರ್ಚ್‌ನಿಂದ ಮೇ ತಿಂಗಳ ಅವಧಿಯಲ್ಲಿ ದೇಶದ ಬಹುತೇಕ ಭಾಗಗಳಲ್ಲಿ ಬಿಸಿಲ ಪ್ರಕೋಪ ವಾಡಿಕೆಗಿಂತ ಹೆಚ್ಚಾಗಿರಲಿವೆ. ಗರಿಷ್ಠ ಹಾಗೂ ಕನಿಷ್ಠ ತಾಪಮಾನಗಳೆರಡೂ ವಾಡಿಕೆ (4ನೇ ಪುಟಕ್ಕೆ)

## ಹೆಚ್ಚಿದ ಬಿಸಿಲು: ದೇವನಗರಿ ಜನತೆಗೆ ದಿಗಿಲು

ದಾವಣಗೆರೆ, ಮಾ.1- ದಿನೇ ದಿನೇ ಹೆಚ್ಚಾಗುತ್ತಿರುವ ಬಿಸಿಲಿನ ತಾಪಕ್ಕೆ ದಾವಣಗೆರೆ ಜನತೆ ಕಂಗಾಲಾಗಿದೆ. ಫೆಬ್ರವರಿಯ ಮಧ್ಯದಲ್ಲಿಯೇ ಬಿಸಿಲಿನ ತಾಪ ಹೆಚ್ಚಾಗಿದ್ದು, ಮಾರ್ಚ್ ಆರಂಭ ಜನತೆಗೆ ದಿಗಿಲು ಮೂಡಿಸಿದೆ. ಇನ್ನು ಮುಂದಿನ ಎರಡು ತಿಂಗಳ ಬಗ್ಗೆ ಆತಂಕವೂ ಇದೆ.

ಬಿಸಿಲಿನ ಪ್ರಖರತೆಯಿಂದ ಮಧ್ಯಾಹ್ನ ವೇಳೆಗೆ ಮನೆಯಿಂದ ಹೊರ ಬರಲು ಜನರು ಹಿಂದೇಟು ಹಾಕುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮಧ್ಯಾಹ್ನದ ವೇಳೆಗೆ ಮಾರುಕಟ್ಟೆ ಸೇರಿದಂತೆ ಬಹುತೇಕ ಪ್ರಮುಖ ರಸ್ತೆಗಳಲ್ಲಿ ಜನಸಂದಣಿ ಕಡಿಮೆಯಾಗುತ್ತಿದೆ. ಈಗಲೇ ಇಷ್ಟೊಂದು ಬಿಸಿಲಿದ್ದರೆ, ಮುಂದಿನ ಏಪ್ರಿಲ್, ಮೇ ತಿಂಗಳ ಪರಿಸ್ಥಿತಿ ಹೇಗೆ ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ.

ಪಾದಚಾರಿಗಳು ನೆತ್ತಿ ಸುಡುವ ಬಿಸಿಲಿನಿಂದ ರಕ್ಷಿಸಿಕೊಳ್ಳಲು (4ನೇ ಪುಟಕ್ಕೆ)



ಇದಿನ್ನೂ ಬೇಸಿಗೆಯ ಆರಂಭಿಕ ದಿನಗಳು. ಆದರೆ ಈಗಲೇ ದಾವಣಗೆರೆ ಜನತೆ ಬಿಸಿಲಿನ ಧಗೆಗೆ ಭಯ ಭೀತರಾಗಿದ್ದಾರೆ. 'ಈಗಲೇ ಹೀಗೆ, ಮುಂದೆ ಹೆಂಗೋ?' ಎಂಬ ಆತಂಕದ ಮಾತುಗಳು ಎಲ್ಲೆಡೆ ಕೇಳಿ ಬರುತ್ತಿವೆ. ದಾವಣಗೆರೆ ರಸ್ತೆಯಲ್ಲಿ ಮಹಿಳೆಯರು ವಾಹನ ಚಲಾಯಿಸುವಾಗ ಬಿಸಿಲಿನಿಂದ ತ್ವಚೆಯನ್ನು ರಕ್ಷಿಸಿಕೊಳ್ಳುತ್ತಿರುವ ಬಗೆ ಇದು.



ನೋಂದಣಿ ಸಂಖ್ಯೆಯ ಹುಡುಕಾಟದಲ್ಲಿ ವಿದ್ಯಾರ್ಥಿನಿಯರು

## ದ್ವಿತೀಯ ಪಿಯುಸಿ ಪರೀಕ್ಷೆ ಶುಭಾರಂಭ

ದಾವಣಗೆರೆ, ಮಾ.1- ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಶುಭಾರಂಭಗೊಂಡಿದ್ದು, ಮೊದಲ ದಿನ 16877 ವಿದ್ಯಾರ್ಥಿಗಳು ಕನ್ನಡ ಪರೀಕ್ಷೆ ಬರೆದಿದ್ದಾರೆ.

ದಾವಣಗೆರೆ ತಾಲ್ಲೂಕಿನಲ್ಲಿ 18 ಕೇಂದ್ರಗಳು, ಹರಿಹರ 4, ಜಗಳೂರು 3, ಚನ್ನಗಿರಿ 5, ಹೊನ್ನಾಳಿ ತಾಲೂಕಿನ 3 ಕೇಂದ್ರಗಳು ಸೇರಿದಂತೆ ಒಟ್ಟು 33 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಜಿಲ್ಲೆಯ 33 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು.

ಪರೀಕ್ಷೆಗೆ ಹೆಸರು (4ನೇ ಪುಟಕ್ಕೆ)

## ಮುರುಘಾ ಮಠ ಆಡಳಿತ ಸಮಿತಿ ಅಧ್ಯಕ್ಷರಾಗಿ ಕಳಸದ ನೇಮಕ



ಚಿತ್ರದುರ್ಗ, ಮಾ. 1 - ಮುರುಘಾ ಮಠದ ಟ್ರಸ್ಟ್ ಮತ್ತು ಎಸ್.ಜೆ.ಎಂ. ವಿದ್ಯಾಪೀಠದ ಆಡಳಿತ ಸಮಿತಿಗೆ ಅಧ್ಯಕ್ಷರನ್ನಾಗಿ ನಿವೃತ್ತ ಐಎಎಸ್ ಅಧಿಕಾರಿ ಸಿ.ಶಿವಯೋಗಿ ಕಳಸದ ಅವರನ್ನು ನೇಮಿಸಲಾಗಿದೆ. ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ರಾಜ್ಯ ಸರ್ಕಾರ ಈ ಕ್ರಮ ತೆಗೆದುಕೊಂಡಿದೆ.

ಪೋಕ್ಸೋ ಕಾಯ್ದೆಯಡಿ ಆರೋಪಿಯಾಗಿರುವ ಶಿವಮೂರ್ತಿ ಶರಣರು ಮಠದ ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಾರದು ಹಾಗೂ ಆಡಳಿತದ ಭಾಗವಾಗಿರಬಾರದು ಎಂದು ಸುಪ್ರೀಂ ಕೋರ್ಟ್ ತಿಳಿಸಿತ್ತು. ಆಡಳಿತ ನೋಡಿಕೊಳ್ಳಲು ಮೂರು ದಿನಗಳಲ್ಲಿ ಸಮಿತಿ ರಚಿಸಬೇಕು ಎಂದು ಫೆ.27ರಂದು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು.

## ಬೆಂಗಳೂರು ಕೆಫೆಯಲ್ಲಿ ಸ್ಫೋಟ: 10 ಜನರಿಗೆ ಗಾಯ

ಬೆಂಗಳೂರು, ಮಾ. 1 – ಇಲ್ಲಿನ ದಿ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟ ಸಂಭವಿಸಿದ್ದು, ಹತ್ತು ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಚೀಲವೊಂದರಲ್ಲಿ ಸುಧಾರಿತ ಸ್ಫೋಟಕ ತಂದಿರಿಸಲಾಗಿತ್ತು ಎಂದು ಪೊಲೀಸರು ಶಂಕಿಸಿದ್ದಾರೆ. ಈ ಸ್ಫೋಟದ ಬಗ್ಗೆ ಎನ್.ಐ.ಎ. ಹಾಗೂ ಐ.ಬಿ.ಗಳಿಗೆ ಮಾಹಿತಿ ನೀಡಲಾಗಿದೆ. ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ತಂಡ ಸ್ಥಳಕ್ಕೆ ಭೇಟಿ ನೀಡಿದೆ.

ವೈಟ್‌ಫೀಲ್ಡ್‌ನಲ್ಲಿರುವ ರಾಮೇಶ್ವರಂ



### ಎನ್.ಐ.ಎ. ತಂಡ ಭೇಟಿ, ಪರಿಶೀಲನೆ

ಕೆಫೆಯಲ್ಲಿ ಸಂಭವಿಸಿದ ಈ ಸ್ಫೋಟದ ಸ್ವರೂಪದ ತನಿಖೆ ನಡೆಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಬಗ್ಗೆ ವಿವರ ನೀಡಿರುವ ರಾಜ್ಯ ಪೊಲೀಸ್ ಮುಖ್ಯಸ್ಥ ಅಲೋಕ್ ಮೋಹನ್, ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಕೆಫೆಯಲ್ಲಿ (4ನೇ ಪುಟಕ್ಕೆ)

## ನಕ್ಸಲ್ ಪೀಡಿತ ಪ್ರದೇಶಕ್ಕೆ ಹೆಲಿಕಾಪ್ಟರ್‌ನಲ್ಲಿ ಪ್ರಶ್ನೆಪತ್ರಿಕೆ

ಸುಕ್ಮಾ, ಮಾ. 1 - ಛತ್ತೀಸ್‌ಘಡದ ನಕ್ಸಲ್ ಪೀಡಿತ ಸುಕ್ಮಾ ಜಿಲ್ಲೆಗೆ ಮಂಡಳಿ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ರವಾನಿಸಲು ಹೆಲಿಕಾಪ್ಟರ್ ಬಳಕೆ ಮಾಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಶುಕ್ರವಾರದಿಂದ 12ನೇ ತರಗತಿಯ ಮಂಡಳಿ ಪರೀಕ್ಷೆಗಳು ಆರಂಭವಾಗಿವೆ. ಶನಿವಾರದಿಂದ 10ನೇ ತರಗತಿ ಮಂಡಳಿ ಪರೀಕ್ಷೆಗಳು ಆರಂಭವಾಗಲಿವೆ.

ಎರಡನೇ ವರ್ಷ ಪ್ರಶ್ನೆಪತ್ರಿಕೆ ರವಾನೆಗೆ ಹೆಲಿಕಾಪ್ಟರ್ ಬಳಸಲಾಗುತ್ತಿದೆ. 2022-23ರಲ್ಲಿ ಸುಕ್ಮಾ ಜಿಲ್ಲೆಯ ಜಗರ್ಗುಂಡದಲ್ಲಿ ಪರೀಕ್ಷಾ ಕೇಂದ್ರ ಸ್ಥಾಪಿಸಲಾಗಿತ್ತು. ಆಗಲೂ ಹೆಲಿಕಾಪ್ಟರ್ ಮೂಲಕ ಪ್ರಶ್ನೆಪತ್ರಿಕೆಗಳನ್ನು ರವಾನಿಸಲಾಗಿತ್ತು.

## ಜಾತಿ ನಿಂದನೆ ಕಾಯ್ದೆ ದುರ್ಬಳಕೆ ಎಂದ ನಟಿ ವಿರುದ್ಧ ಎಫ್.ಐ.ಆರ್.

ಛತ್ರಪತಿ ಸಾಂಭಾಜಿನಗರ, ಮಾ. 1 – ಜಾತಿ ನಿಂದನೆ ಕಾಯ್ದೆ ದುರ್ಬಳಕೆಯಾಗುತ್ತಿದೆ ಎಂದು ಹೇಳಿದ ಮರಾಠಿ ನಟಿ ಕೇತಕಿ ಚಿತಾಳೆ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಪಾರ್ಲಿ ಎಂಬಲ್ಲಿ ಆಯೋಜಿಸಲಾಗಿದ್ದ ಸಮಾರಂಭವೊಂದರಲ್ಲಿ ಮಾತನಾಡಿದ (2ನೇ ಪುಟಕ್ಕೆ)

## ಜಿಎಸ್ಟಿ ಸಂಗ್ರಹ ಶೇ.12.5 ಹೆಚ್ಚಳ

ನವದೆಹಲಿ, ಮಾ. 1 – ಫೆಬ್ರವರಿ ತಿಂಗಳಲ್ಲಿ ಜಿ.ಎಸ್.ಟಿ. ಸಂಗ್ರಹ ಶೇ.12.5ರಷ್ಟು ಹೆಚ್ಚಾಗಿ 1.68 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಏಪ್ರಿಲ್ (2ನೇ ಪುಟಕ್ಕೆ)

## ಕಚ್ಚಾ ತೈಲದ ಮೇಲಿನ ಆಕಸ್ಮಿಕ ತೆರಿಗೆ ಹೆಚ್ಚಳ

ನವದೆಹಲಿ, ಮಾ. 1 - ಕಚ್ಚಾ ತೈಲದ ಮೇಲಿನ ಲಾಭದ ಆಕಸ್ಮಿಕ ತೆರಿಗೆಯನ್ನು ಪ್ರತಿ ಟನ್‌ಗೆ 4,600 ರೂ.ಗಳಿಗೆ ಹೆಚ್ಚಿಸಲಾಗಿದೆ. ಇದುವರೆಗೂ 3,300 ರೂ.ಗಳ ತೆರಿಗೆ ಇತ್ತು. ಇದೇ ವೇಳೆ ಡೀಸೆಲ್ ರಫ್ತಿನ ಮೇಲಿರುವ ವಿಶೇಷ ಹೆಚ್ಚುವರಿ ಅಬಕಾರಿ ತೆರಿಗೆಯನ್ನು ಶೂನ್ಯಕ್ಕೆ ಇಳಿಸಲಾಗಿದೆ. ಇದುವರೆಗೂ ಡೀಸೆಲ್ ರಫ್ತಿಗೆ ಲೀಟರ್‌ಗೆ 1.50 ರೂ.ಗಳ ತೆರಿಗೆ ಇತ್ತು.

## ಹಿರಿಯ ವರ್ತಕ ಕಿತ್ತೂರು ಜಯಣ್ಣ ನಿಧನ



ಜಗಳೂರು ತಾಲ್ಲೂಕಿನ ಉದ್ದಗಟ್ಟ ಗ್ರಾಮದ ಮುಖಂಡರೂ, ದಾವಣಗೆರೆಯ ಹೆಸರಾಂತ ವರ್ತಕರೂ, ಸಮಾಜ ಸೇವಕರೂ ಆಗಿದ್ದ

**ಶ್ರೀ ಕಿತ್ತೂರು ಜಯಣ್ಣ**

ಅವರು ದಿನಾಂಕ : 01.03.2024ರ ಶುಕ್ರವಾರ ಮುಂಜಾನೆ 7.10ಕ್ಕೆ ನಿಧನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ಸುಮಾರು 65 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 02.03.2024ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಜಗಳೂರು ತಾಲ್ಲೂಕಿನ ಉದ್ದಗಟ್ಟ ಗ್ರಾಮದಲ್ಲಿರುವ ಅವರ ತೋಟದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 23.02.2024ರಂದು ನಿಧನರಾದ
ನಮ್ಮ ಕಲಾ ಪ್ರಕಾಶ ವೃಂದದ ಸಂಸ್ಥಾಪಕರೂ ಹಾಗೂ ಹಾಲಿ ನಿರ್ದೇಶಕರೂ ಆದ

**ಶ್ರೀ ಟಿ. ನಿಜಲಿಂಗಯ್ಯ**

ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸಿಕೊಳ್ಳುತ್ತೇವೆ.

✦ ಶ್ರೀ ಕುಬೇರಪ್ಪ ಎ.ಹೆಚ್., ಅಧ್ಯಕ್ಷರು ✦ ಶ್ರೀ ಹೆಚ್.ಎಸ್. ಗುರುನಾಥ್, ಉಪಾಧ್ಯಕ್ಷರು
✦ ರಮಣ್‌ಲಾಲ್ ಪಿ. ಸಂಘವಿ, ಗೌರವ ಅಧ್ಯಕ್ಷರು ✦ ಎಸ್.ಕೆ. ವೀರಣ್ಣ, ಗೌರವ ಪ್ರಧಾನ ಕಾರ್ಯದರ್ಶಿ
✦ ಶ್ರೀ ಕಿರುವಾಡಿ ವಿ. ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ✦ ಶ್ರೀಮತಿ ಬಿ. ಅನಸೂಯ, ಸಹ ಕಾರ್ಯದರ್ಶಿ

ನಿರ್ದೇಶಕರುಗಳು : ✦ ಶ್ರೀ ಎನ್.ಎ. ಮುರುಗೇಶ್ ✦ ಶ್ರೀ ಪೆ.ನಾ. ಗೋಪಾಲರಾವ್ ✦ ಶ್ರೀ ಜಿ.ಕೆ. ಪಂಚಣ್ಣ ✦ ಶ್ರೀ ಕೆ. ತಿಮ್ಮಪ್ಪ ✦ ಶ್ರೀ ಅನೂಪ ಡಾ. ವೀರೇಂದ್ರಸ್ವಾಮಿ ✦ ಶ್ರೀ ವಿ. ಬಸವರಾಜಯ್ಯ ✦ ಶ್ರೀ ಬಿ. ವೀರೇಶ್ ✦ ಶ್ರೀ ಎಸ್.ಕೆ. ಪ್ರಭುಪ್ರಸಾದ್ ✦ ಶ್ರೀಮತಿ ಉಮಾ ವಾಗೀಶ್ ✦ ಶ್ರೀ ತುಳಸೀನಾಥ್ ಎನ್. ✦ ಶ್ರೀ ವಿಶಾಲ್ ಕುಮಾರ್ ಆರ್. ಸಂಘವಿ ✦ ಶ್ರೀಮತಿ ಜಯಮ್ಮ ಪರಶುರಾಮಪ್ಪ ✦ ಶ್ರೀ ಚಿದಾನಂದಪ್ಪ ಬಿ. ✦ ಶ್ರೀಮತಿ ಅನಿತಾ ಕೋಗುಂಡಿ ಪ್ರಕಾಶ್ ✦ ಶ್ರೀ ವಿವೇಕ್ ಕೆ. ವಿಶೇಷ ಆಹ್ವಾನಿತರು ಹಾಗೂ ಸಿಬ್ಬಂದಿ ವರ್ಗದವರು

**ಕಲಾ ಪ್ರಕಾಶ ವೃಂದ ಸಹಕಾರ ಸಮುದಾಯ ಭವನ**
**ದಾವಣಗೆರೆ – ಹರಿಹರ ಅರ್ಬನ್ ಕೋ-ಆಪ್. ಬ್ಯಾಂಕ್,** ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.

ಹಿರಿಯ ಅರಿವಳಿಕೆ ತಜ್ಞರಾದ

## ಡಾ. ಮಂಜುನಾಥ ಜಾಜೂರು ನಿಧನ



ದಿ. ಶ್ರೀಮತಿ ಸುನಂದಮ್ಮ ಮತ್ತು ದಿ. ಜಾಜೂರು ಓಂಕಾರಪ್ಪ ದಂಪತಿ ಪುತ್ರರಾದ

**ಡಾ. ಮಂಜುನಾಥ ಜಾಜೂರು**

(ನಿವೃತ್ತ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಅರಿವಳಿಕೆ ವಿಭಾಗ, ಜೆಜೆಎಂ ಮೆಡಿಕಲ್ ಕಾಲೇಜು, ದಾವಣಗೆರೆ.)

ಇವರು, ದಿನಾಂಕ : 01.03.2024ನೇ ಶುಕ್ರವಾರ ಬೆಳಿಗ್ಗೆ 10.55ಕ್ಕೆ ನಿಧನರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 72 ವರ್ಷ ವಯಸ್ಸಾಗಿತ್ತು. ಮೃತರ ಪಾರ್ಥಿವ ಶರೀರವನ್ನು ದಿನಾಂಕ : 03.03.2024ನೇ ಭಾನುವಾರ ಬೆಳಿಗ್ಗೆ 9 ರಿಂದ 12.00ರವರೆಗೆ ತರಳಬಾಳು ಬಡಾವಣೆಯಲ್ಲಿರುವ ಮೃತರ ಸ್ವಗೃಹದಲ್ಲಿ ಇರಿಸಲಾಗುವುದು. ನಂತರ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗದವರು

ಶ್ರೀಮತಿ ಗೀತಾ ಜಾಜೂರ್ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಬೂದಿಹಾಳ್ ಗೌಡರ ವಂಶಸ್ಥರು, ಜಾಜೂರು ವಂಶಸ್ಥರು ಹಾಗೂ ಬಂಧು-ಮಿತ್ರರು.

# ಅಭಿವೃದ್ಧಿ ಶೂನ್ಯ ಕಾಂಗ್ರೆಸ್ ಸರ್ಕಾರ

## ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ಆರೋಪ

ದಾವಣಗೆರೆ, ಮಾ.1- ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಹತ್ತು ತಿಂಗಳಾಗಿದ್ದು, ಎಲ್ಲಾ ರಂಗಗಳಲ್ಲೂ ವೈಫಲ್ಯ ಕಂಡಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎನ್.ರಾಜಶೇಖರ್ ಆರೋಪಿಸಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬರ ಪರಿಹಾರ ಕಾರ್ಯದಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದ್ದು, 875ಕ್ಕೂ ಹೆಚ್ಚು ಜನರು ಸಿದ್ಧರಾಮಯ್ಯ ಅಧಿಕಾರವಧಿ ಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದಾಗ್ಯೂ ಸರ್ಕಾರಕ್ಕೆ ರೈತರ ಪರ ಕಾಳಜಿ ಇಲ್ಲ ಎಂದರು.

ಎಸ್ಸಿ-ಎಸ್ಟಿಗೆ ಸೇರಿದ 11 ಕೋಟಿ ರೂ.ಗೂ ಹೆಚ್ಚು ಹಣವನ್ನು ಗ್ಯಾರಂಟಿ ಉದ್ದೇಶಗಳಿಗೆ ಬಳಸಿಕೊಂಡು ಶೋಷಿತ, ತಳ ಸಮುದಾಯದ ಜನರಿಗೆ ಅನ್ಯಾಯ ಮಾಡಲಾಗಿದೆ. ಇದು ದಲಿತ ವಿರೋಧಿ ಸರ್ಕಾರ. ರಾಜ್ಯದ ಖಜಾನೆ ಖಾಲಿಯಾಗಿದ್ದು, ಇದೊಂದು ಶೂನ್ಯ ಅಭಿವೃದ್ಧಿ ಸರ್ಕಾರ ಎಂದರು.

ವಿಧಾನಸೌಧದ ಆವರಣದಲ್ಲಿಯೇ ಪಾಕಿಸ್ತಾನದ ಪರ ಘೋಷಣೆ ಕೂಗಿರುವ ಘಟನೆ ನಡೆದಿದ್ದು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಪೂರ್ಣ ಕುಸಿದಿದೆ. ಸರ್ಕಾರ ಅಲ್ಪ ಸಂಖ್ಯಾತರ ಓಲೈಕೆಗೆ ಮುಂದಾಗಿದೆ.

ಬೆಲೆ ಏರಿಕೆಯೇ ಕಾಂಗ್ರೆಸ್ ಸರ್ಕಾರದ ದೊಡ್ಡ ಸಾಧನೆಯಾಗಿದ್ದು, ಬರದಲ್ಲಿ ಜನತೆಗೆ ಬೆಲೆ ಏರಿಕೆಯ ಬರೆ ಎಳೆಯಲಾಗುತ್ತಿದೆ ಎಂದು ರಾಜಶೇಖರ್ ಆರೋಪಿಸಿದರು.

ರೈತ ಮುಖಂಡ ಸತೀಶ್ ಬಿ.ಎಂ. ಕೊಳೇನಹಳ್ಳಿ ಮಾತನಾಡಿ, ಫೆ.29ರ ಮಧ್ಯ ರಾತ್ರಿಯಿಂದಲೇ ಭದ್ರಾ ನಾಲಾ ನೀರು ಸ್ಥಗಿತಗೊಳಿಸಲಾಗಿದೆ. ಕೊನೆ ಭಾಗಕ್ಕೆ ನೀರು ತಲುಪಲೇ ಇಲ್ಲ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ರೈತರ ಸಂಕಷ್ಟಕ್ಕೆ ಧಾವಿಸಲಿಲ್ಲ ಎಂದು ಆರೋಪಿಸಿದರು.

ಕೊನೆ ಭಾಗಕ್ಕೆ ನೀರು ತಲುಪದೇ ಇದ್ದರೆ ಭಾಗದ ಹಳ್ಳಿಗಳ ಕುಡಿಯುವ ನೀರಿನ ಬೋರ್‌ಗಳ ವಿಫಲವಾಗಿ ನೀರಿಗಾಗಿ ಹಾಹಾಕಾರ ಉಂಟಾಗುತ್ತದೆ. ಇನ್ನಾದರೂ ಜಿಲ್ಲಾ ಉಸ್ತುವಾರಿ ಸಚಿವರು ರೈತರ ನೆರವಿಗೆ ಧಾವಿಸಬೇಕು ಎಂದು ಆಗ್ರಹಿಸಿದರು.

ಚುನಾವಣಾ ಹೊಸ್ತಿಲಿನಲ್ಲಿ ಈಡೇರಿಸಲು ಅಸಾಧ್ಯವಾದ ಬೇಡಿಕೆ ಗಳನ್ನು ಇಟ್ಟುಕೊಂಡು ದೆಹಲಿಯಲ್ಲಿ ಹೋರಾಟ ನಡೆಸಲಾಗುತ್ತಿದೆ. ಇದು ಪ್ರಧಾನಿ ನರೇಂದ್ರ ಮೋದಿ ಅವರ ಹೆಸರು ಕೆಡಿಸುವ ಯತ್ನ ಎಂದು ಸತೀಶ್ ಆರೋಪಿಸಿದರು.

ಜಿಲ್ಲೆಯಲ್ಲಿ ಶುದ್ಧ ನೀರಿನ ಘಟಕಗಳು ದುಃಸ್ಥಿತಿಯಲ್ಲಿದ್ದು ಶೀಘ್ರವೇ ಸರಿಪಡಿಸಬೇಕು ಎಂದು ಇದೇ ವೇಳೆ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶಿವರಾಜ್ ಪಾಟೀಲ್, ಐಗೂರು ಲಿಂಗರಾಜ್, ಧನಂಜಯ ಕಡ್ಲೇಬಾಳು, ಅನಿಲ್ ಕುಮಾರ್ ನಾಯಕ್, ಜಿ.ಕೊಟ್ರೇಶ್ ಗೌಡ, ಹೆಚ್.ಪಿ. ವಿಶ್ವಾಸ್, ಶಶಿಕುಮಾರ್ ಹಾಗೂ ಇತರರಿದ್ದರು.

# ಸ್ನಾತಕೋತ್ತರ ಕೇಂದ್ರದ ಅಧ್ಯಯನ ಕೇಂದ್ರ ನಿರ್ಮಾಣಕ್ಕೆ 100 ಎಕರೆ ಭೂಮಿ ನೀಡಲು ಪ್ರಯತ್ನ



## ಹರಪನಹಳ್ಳಿ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಭರವಸೆ

ಹರಪನಹಳ್ಳಿ, ಮಾ. 1- ಪಟ್ಟಣದಲ್ಲಿ ಆರಂಭವಾಗಿರುವ ನೂತನ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ಕಂದಾಯ ಇಲಾಖೆಯಿಂದ 100 ಎಕರೆ ಭೂಮಿ ನೀಡಲು ಪ್ರಯತ್ನ ಮಾಡುವುದಾಗಿ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಭರವಸೆ ನೀಡಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹೊಸ ಕಟ್ಟಡದಲ್ಲಿ ಉನ್ನತ ಶಿಕ್ಷಣ ಇಲಾಖೆಯಿಂದ ತಾತ್ಕಾಲಿಕವಾಗಿ ಮಂಜೂರಾಗಿರುವ ನಾಲ್ಕು ಕೊಠಡಿಗಳಲ್ಲಿ ನೂತನ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಕಚೇರಿ ಉದ್ಘಾಟಿಸಿ ಅವರು ಮಾತನಾಡಿದರು.

ಈಗಾಗಲೇ ತಹಶೀಲ್ದಾರ್ ಬಳಿ 50 ಎಕರೆ ಭೂಮಿ ನೀಡುವ ಕುರಿತು ಚರ್ಚಿಸಿದ್ದು, ಇನ್ನೂ 50 ಎಕರೆ ಭೂಮಿಯನ್ನು ಸರ್ಕಾರದಿಂದ ಕೊಡಿಸಲು ಸಕಲ ಪ್ರಯತ್ನ ಮಾಡುತ್ತೇನೆ, ಮುಂದಿನ ದಿನಗಳಲ್ಲಿ ಇಲ್ಲಿಯೇ ವಿಶ್ವವಿದ್ಯಾಲಯ ಸ್ಥಾಪನೆ ಆಗಲು ಅನುಕೂಲವಾಗುತ್ತದೆ ಎಂದು ಹೇಳಿದರು.

ಹರಪನಹಳ್ಳಿ ಶೈಕ್ಷಣಿಕ ಹಬ್ ಆಗಿದ್ದು, ಇಲ್ಲಿಯ ಸಾಕಷ್ಟು ವಿದ್ಯಾರ್ಥಿಗಳು ಸ್ನಾತಕೋತ್ತರ ಕೋರ್ಸ್‌ಗಳ ಅಧ್ಯಯನ ಮಾಡಲು ದೂರದ ನಗರಗಳಿಗೆ ಹೋಗುತ್ತಿರುವುದನ್ನು ಮನಗಂಡು ಇಲ್ಲಿ ಪಿಜಿ ಸೆಂಟರ್ ತೆರೆಯಲಾಗಿದೆ ಎಂದು ಹೇಳಿದರು.

ಇಲ್ಲಿನ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಅಭಿವೃದ್ಧಿಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಹೇಳಿದ ಶಾಸಕರು, ಇದರ ಸದುಪಯೋಗವನ್ನು ಹರಪನಹಳ್ಳಿ ಸೇರಿದಂತೆ ಸುತ್ತ ಮುತ್ತಲ ತಾಲ್ಲೂಕುಗಳ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದು ಕೋರಿದರು.

ಬಳ್ಳಾರಿಯ ಶ್ರೀಕೃಷ್ಣದೇವರಾಯ ವಿಶ್ವ ವಿದ್ಯಾಲಯದ ಕುಲಪತಿ ಪ್ರೊ. ಅನಂತ ಎಲ್.ಝುಂಡೇಕರ್ ಮಾತನಾಡಿ, ಉನ್ನತ ಶಿಕ್ಷಣ ದೂರದ ಬೆಟ್ಟವಾಗಬಾರದು, ಪ್ರತಿಯೊಬ್ಬರ ಮನೆ ಮನೆಗೂ ತಲುಪಬೇಕು, ಹೆಣ್ಣು ಮಕ್ಕಳು ಉನ್ನತ ಶಿಕ್ಷಣದಿಂದ ದೂರ ಉಳಿಯಬಾರದು ಎಂದರು.

ಇಲ್ಲಿಯ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಂಯೋಜಕರಾಗಿ ಬಳ್ಳಾರಿ ಶ್ರೀಕೃಷ್ಣ ವಿವಿಯ ಸಹಾಯಕ ಕುಲ ಸಚಿವ ಡಾ.ಪ್ರಶಾಂತರವರನ್ನು ನೇಮಕ ಮಾಡಿದ್ದೇನೆ ಎಂದು ಕುಲಸಚಿವರು ಘೋಷಿಸಿದರು.

ವಿವಿಯ ಸಿಂಡಿಕೇಟ್ ಸದಸ್ಯ ಸುರೇಶ ಆರ್. ಸಜ್ಜನ ಮಾತನಾಡಿ, ಹೊಸದಾಗಿ ಆರಂಭಗೊಂಡಿರುವ ಇಲ್ಲಿಯ ಪಿ.ಜೆ. ಸೆಂಟರ್‌ಗೆ ಕನಿಷ್ಠ 200 ವಿದ್ಯಾರ್ಥಿಗಳಾದರೂ ಸೇರ್ಪಡೆಯಾಗಬೇಕು, ಇದರ ಉನ್ನತಿಗೆ ಸರ್ವರೂ ಕೈ ಜೋಡಿಸಬೇಕು ಎಂದು ಅವರು ತಿಳಿಸಿದರು.

ಬಳ್ಳಾರಿ ವಿವಿಯ ಕುಲಸಚಿವರಾದ ಎಸ್.ಎನ್.ರುದ್ರೇಶ, ಪ್ರೊ.ರಮೇಶ ಓಲೇಕಾರ ಮಾತನಾಡಿದರು. ವಿವಿಯ ಸಿಂಡಿಕೇಟ್ ಸದಸ್ಯ ಟಿ.ಎಂ.ರಾಜಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ತೆಗ್ಗಿನಮಠದ ಕಾರ್ಯದರ್ಶಿ ಡಾ.ಟಿ. ಎಂ.ಚಂದ್ರಶೇಖರಯ್ಯ, ಬುದ್ದ ಬಸವ ಅಂಬೇಡ್ಕರ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಗುಂಡಗತ್ತಿ ಕೊಟ್ರಪ್ಪ, ಹರಪನಹಳ್ಳಿ ಸರ್ಕಾರಿ ಪದವಿ ಕಾಲೇಜಿನ ಪ್ರಾಚಾರ್ಯ ಷಣ್ಮೂಖನಗೌಡ, ಹೂವಿನ ಹಡಗಲಿ ಪ್ರಾಚಾರ್ಯರಾದ ಪ್ರೊ.ವಿಜ ಕುಮಾರ, ಎಸ್.ಎಸ್.ಪಾಟೀಲ್, ಹೊಸಪೇಟೆಯ ಪ್ರಾಚಾರ್ಯ ವಿಶ್ವನಾಥಗೌಡ್ರು, ಕೂಡ್ಲಿಗಿಯ ನಿವೃತ್ತ ಪ್ರಾಚಾರ್ಯ ಪಿ. ಎಂ.ಸೋಮಯ್ಯ, ತಾ.ಪಂ. ಮಾಜಿ ಸದಸ್ಯರಾದ ಹುಲ್ಲಿಕಟ್ಟೆ ಚಂದ್ರಪ್ಪ, ಮೈದೂರು ರಾಮಣ್ಣ, ಪ್ರಾಧ್ಯಾಪಕರಾದ ಡಾ.ಭೀಮಪ್ಪ, ಪ್ರಭುನಾಯ್ಕ, ಕಲ್ಲಹಳ್ಳಿ ಗುರುಸಿದ್ದಯ್ಯ, ಕನ್ನಿಹಳ್ಳಿ ಪ್ರಭಾಕರ ಇತರರು ಉಪಸ್ಥಿತರಿದ್ದರು.

# ಮೋದಿ ನಾಯಕತ್ವದಲ್ಲಿ ಭಾರತ ಸದೃಢ, ಸುಭದ್ರ

## ಕೇಂದ್ರದ ಯೋಜನೆಗಳ ಫಲಾನುಭವಿಗಳ ಸಂಪರ್ಕ ಅಭಿಯಾನದಲ್ಲಿ ಶಾಸಕ ಹರೀಶ್



ಹರಿಹರ, ಮಾ.1- ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಿಂದಲೇ ಭಾರತ ದೇಶವು ಸದೃಢವಾಗಿ, ಸುಭದ್ರವಾಗಿ ಅಭಿವೃದ್ಧಿ ರಾಷ್ಟ್ರವಾಗಿ ವಿಶ್ವಗುರು ಸ್ಥಾನದತ್ತ ದಾಪುಗಾಲಿಟ್ಟಿದೆ ಎಂದು ಶಾಸಕ ಬಿ.ಪಿ.ಹರೀಶ್ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಕಾಟ್ವೆ ಭವನದಲ್ಲಿ ಇಂದು ನಡೆದ ಫಲಾನುಭವಿಗಳ ಸಂಪರ್ಕ ಅಭಿಯಾನ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ನರೇಂದ್ರ ಮೋದಿಯವರ ನಾಯಕತ್ವವನ್ನು ಇಡೀ ವಿಶ್ವವೇ ಒಪ್ಪಿಕೊಂಡಿದೆ. ಸತತ ಎರಡನೇ ಬಾರಿಗೆ ಪ್ರಧಾನಿಯಾಗಿರುವ ಮೋದಿಯವರು ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯು ತ್ತಿದ್ದಾರೆ.

ಹಲವಾರು ಯೋಜನೆಗಳನ್ನು ಜಾರಿಗೆ ತರುವ ಮೂಲಕ ವಿಶ್ವ ನಾಯಕರಾಗಿ ಹೊರ ಹೊಮ್ಮಿದ್ದಾರೆ. ಈ ಬಾರಿಯೂ

**'ದೇಶದ ಜನತೆ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡಲು ತುದಿಗಾಲಲ್ಲಿ ನಿಂತಿದ್ದಾರೆ' - ಸಂಸದ ಜಿ.ಎಂ.ಸಿದ್ದೇಶ್ವರ**

ಕೂಡ ಅವರನ್ನು ಮತ್ತೊಮ್ಮೆ ಪ್ರಧಾನಿಯನ್ನಾಗಿ ಮಾಡೋದು ನಮ್ಮೆಲ್ಲರ ಕರ್ತವ್ಯವಾಗಿದೆ. ಜನರಿಗಾಗಿ ಅವರು ತಂದಂತಹ ಯೋಜನೆಗಳನ್ನು ಮನೆ-ಮನೆಗೆ ತಲುಪಿಸುವ ಕಾರ್ಯವನ್ನು ಮಾಡುವ ಉದ್ದೇಶದಿಂದ ಫಲಾನುಭವಿಗಳ ಸಂಪರ್ಕ ಅಭಿಯಾನವೆಂಬ ಕಾರ್ಯಾಗಾರವನ್ನು ಹಮ್ಮಿಕೊ ಳ್ಳಲಾಗಿದೆ ಎಂದರು.

ಸಂಸದ ಜಿ.ಎಂ.ಸಿದ್ದೇಶ್ವರ ಮಾತನಾಡಿ, ಕಳೆದ ಬಾರಿಗಿಂತ ಇನ್ನೂ ಹೆಚ್ಚಿನ ಸೀಟುಗಳನ್ನು ನಾವೂ ಗೆಲ್ಲಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ತಂದಂತಹ ಯೋಜನೆಗಳನ್ನು ಪಡೆದಂತಹ ಫಲಾನುಭವಿಗಳನ್ನು ಗುರುತಿಸಿ ಸಂಪರ್ಕಿಸಿ ಮೋದಿಯವರನ್ನು ಪ್ರಧಾನಿಯನ್ನಾಗಿ ಸುವಂತೆ ಕೇಳಬೇಕು ಎಂದು ಅವರು ತಿಳಿಸಿದರು.

ಫಲಾನುಭವಿಗಳ ಸಂಪರ್ಕ ಅಭಿಯಾನದ ಜಿಲ್ಲಾ ಸಂಚಾಲಕ ಬಿ.ಜೆ. ಅಜಯಕುಮಾರ್ ಮಾತನಾಡಿ, ವಿಶ್ವವೇ ಮೆಚ್ಚಿದ ನಾಯಕರೆಂದರೆ ಅದು ನಮ್ಮ ಮೋದಿಯವರು. ಅವರು ತಂದಂತಹ ಯೋಜನೆಗಳನ್ನು ಜನರು ಹೇಗೆ ಪಡೆದುಕೊಂಡಿ ದ್ದಾರೆ, ಯಾರೆಲ್ಲ ಪಡೆದುಕೊಂಡಿದ್ದಾರೆ ಎಂಬುದನ್ನು ತಿಳಿಯಲು ಈ ಕಾರ್ಯಾಗಾರವನ್ನು ಹಮ್ಮಿಕೊಳ್ಳ ಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್ ವಹಿಸಿದ್ದರು. ತಾಲೂಕು ಸಂಚಾಲಕಿ ರೂಪಾ ಶಶಿಕಾಂತ್ ಹಾಗೂ ಗುಡದಳ್ಳಿ ಮಹಾಂತೇಶ, ಗ್ರಾಮಾಂತರ ಘಟಕದ ಅಧ್ಯಕ್ಷ ಲಿಂಗರಾಜ್ ಹಿಂಡಸಘಟ್ಟ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಮುಖಂಡರಾದ ಚಂದ್ರಶೇಖರ ಪೂಜಾರ್ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಐರಣಿ ಅಣ್ಣೇಶ್, ಸಹ ಸಂಚಾಲ ಕರಾದ ಅಮರ್, ಸುನೀಲಕುಮಾರ್, ಸಿದ್ದೇಶ್ ಕರೂರು, ಶ್ರೀಕಾಂತ್ ಮತ್ತಿತರರು ಉಪಸ್ಥಿತರಿದ್ದರು.

# ವರ್ತಕ ಕಿತ್ತೂರು ಜಯಣ್ಣ ನಿಧನ



ದಾವಣಗೆರೆ, ಮಾ. 1 - ಮೂಲತಃ ಜಗಳೂರು ತಾಲ್ಲೂಕಿನ ಉದ್ದಗಟ್ಟ ಗ್ರಾಮದವರಾದ ನಗರದ ಹಿರಿಯ ವರ್ತಕ ಕಿತ್ತೂರು ಜಯಣ್ಣ ಇಂದು ಬೆಳಿಗ್ಗೆ 7.10.ಕ್ಕೆ ನಿಧನರಾದರು.

ಅವರಿಗೆ 65 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಎರಡು ದಶಕಗಳ ಕೆಳಗೆ ರೈತ ಸಂಘ ಸೇರಿ ರೈತ ಸಂಘದ ಅಭ್ಯರ್ಥಿಯಾಗಿ ಜಗಳೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಎದುರಿಸಿದ್ದರು.

ಜಯಣ್ಣ ಅವರ ಅಂತ್ಯಕ್ರಿಯೆಯನ್ನು ಸ್ವಗ್ರಾಮವಾದ ಜಗಳೂರು ತಾಲ್ಲೂಕಿನ ಉದ್ದಗಟ್ಟ ತೋಟದಲ್ಲಿ ಮಧ್ಯಾಹ್ನ 12ಕ್ಕೆ ನೆರವೇರಲಿದೆ.

ಕಿತ್ತೂರು ಜಯಣ್ಣ ಅವರ ನಿಧನಕ್ಕೆ ಜಿಲ್ಲಾ ಜೆಡಿಎಸ್ ಮುಖಂಡ ಎಂ.ಎನ್. ನಾಗರಾಜ್ ಸಂತಾಪ ವ್ಯಕ್ತಪಡಿಸಿದ್ದಾರೆ.

# ನಿವೃತ್ತ ಐಎಎಸ್ ಅಧಿಕಾರಿ ಕೆ. ಶಿವರಾಮ್ ನಿಧನಕ್ಕೆ ಮೇಣದ ಬತ್ತಿ ಹಚ್ಚಿ ಸಂತಾಪ



**ಜಗಳೂರು**

ಜಗಳೂರು, ಮಾ. 1 - ಪಟ್ಟಣದ ಅಂಬೇಡ್ಕರ್ ವೃತ್ತದ ಬಳಿ ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಕನ್ನಡ ಚಲನಚಿತ್ರ ನಟ ಕೆ. ಶಿವರಾಮ್ ನಿಧನಕ್ಕೆ ಮೇಣದ ಬತ್ತಿ ಹಚ್ಚಿ ಸಂತಾಪ ಸೂಚಿಸಲಾಯಿತು.

ಈ ವೇಳೆ ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ ಮಾತನಾಡಿ, ಕೆ. ಶಿವರಾಮ್ ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಬಡವರಿಗೆ ಸೂರು ಕಲ್ಪಿಸಿದರು. ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮ ರೂಪಿಸಿದ ಮೊದಲ ಅಧಿಕಾರಿಯಾಗಿದ್ದರು ಎಂದರು.

ಬಿಜೆಪಿ ಮುಖಂಡ ಬಿಸ್ತುವಳ್ಳಿ ಬಾಬು ಮಾತನಾಡಿ, ಬಿಜೆಪಿ ಪಕ್ಷದಲ್ಲಿ ಸಂಘಟನೆಯೊಂದಿಗೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಬಳಿ ಗುರುತಿಸಿಕೊಂಡಿದ್ದ ಕೆ. ಶಿವರಾಮ್ ಅವರ ಅಕಾಲಿಕ ಮರಣ ನೋವು ತಂದಿದೆ ಎಂದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲ ನಾಗಲಿಂಗಪ್ಪ, ಛಲವಾದಿ ಸಮಾಜದ ಗೌರವ ಅಧ್ಯಕ್ಷ ಸಿ. ಲಕ್ಷ್ಮಣ, ಮುಖಂಡರಾದ ಓಬಣ್ಣ, ರಾಜಪ್ಪ ವ್ಯಾಸಗೊಂಡನಹಳ್ಳಿ, ಬಿದರಕೆರೆ ರವಿಕುಮಾರ್, ಸತೀಶ್ ಮಲೆಮಾಚಿಕೆರೆ, ವಕೀಲರಾದ ಮರೇನಹಳ್ಳಿ ಬಸವರಾಜ್ ಸಣ್ಣ ಓಬಯ್ಯ, ಚಿಕ್ಕಮ್ಮನಹಟ್ಟಿ ಮಂಜಣ್ಣ, ಲೋಕೇಶ್, ಮಾದಿಹಳ್ಳಿ ಮಂಜುನಾಥ್, ನಾಗೇಶ್, ಗೌರಿಪುರ ಕುಬೇರಪ್ಪ, ಬಸವರಾಜ್ ಸಿದ್ದಮ್ಮನಹಳ್ಳಿ, ಗಿರೀಶ್ ಸೇರಿದಂತೆ ಇತರರು ಇದ್ದರು.

# ನಗರದಲ್ಲಿ ನಾಳೆ ಚಿತ್ರಸಂತೆ

ದಾವಣಗೆರೆ, ಮಾ. 1- ನಗರದ ಎ.ವಿ.ಕೆ. ಕಾಲೇಜು ರಸ್ತೆಯಲ್ಲಿ ನಾಡಿದ್ದು ದಿನಾಂಕ 3 ರ ಭಾನುವಾರ ಮೂರನೇ ವರ್ಷದ ದಾವಣಗೆರೆ ಚಿತ್ರಸಂತೆ-2024 ಹಮ್ಮಿಕ್ಕೊಳ್ಳಲಾಗಿದೆ ಎಂದು ದಾವಣಗೆರೆ ಚಿತ್ರಕಲಾ ಪರಿಷತ್ ಕಾರ್ಯದರ್ಶಿ ಡಿ. ಶೇಷಾಚಲ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಅಂದು ಬೆಳಿಗ್ಗೆ 10.30 ಕ್ಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಚಿತ್ರಸಂತೆಗೆ ಚಾಲನೆ ನೀಡುವರು. ಪರಿಷತ್ ಅಧ್ಯಕ್ಷ ಡಿ.ಸಿ. ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದಾರೆ.

ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಡಿ.ಜಿ.ಶಾಂತನಗೌಡ, ಕೆ. ಎಸ್. ಬಸವಂತಪ್ಪ, ಬಿ. ದೇವೇಂದ್ರಪ್ಪ, ಮೇಯರ್ ವಿನಾಯಕ ಪೈಲ್ವಾನ್, ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಎಸ್ಪಿ ಉಮಾ ಪ್ರಶಾಂತ್, ಪಾಲಿಕೆ ಆಯುಕ್ತರಾದ ರೇಣುಕಾ ಮತ್ತಿತರರು ಭಾಗವಹಿಸಲಿದ್ದಾರೆ.

ಅದೇ ದಿನ ಸಂಜೆ 5.15 ಕ್ಕೆ ಚಿತ್ರಸಂತೆ ಸಮಾರೋಪ ಸಮಾರಂಭ ನಡೆಯಲಿದ್ದು, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಬಿ.ಪಿ. ಹರೀಶ್, ಬಸವರಾಜ ಶಿವಗಂಗಾ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ಜಿ.ಪಂ. ಸಿಇಓ ಡಾ. ಸುರೇಶ ಬಿ. ಇಟ್ನಾಳ್ ಮತ್ತಿತರರು ಭಾಗಹಿಸಲಿದ್ದಾರೆ.

ಬೆಳಿಗ್ಗೆ 8ರಿಂದ ಸಂಜೆ 7 ರವರೆಗೆ ಚಿತ್ರಸಂತೆ ನಡೆಯಲಿದೆ. ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕದ ವಿವಿಧ ಭಾಗಗಳಿಂದ ಸುಮಾರು 150 ಕ್ಕೂ ಹೆಚ್ಚು ಚಿತ್ರ ಕಲಾವಿದರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಪರಿಷತ್ ಪದಾಧಿಕಾರಿಗಳಾದ ಡಿ.ಸಿ. ಶ್ರೀನಿವಾಸ್, ಸದಾನಂದ ಹೆಗಡೆ, ಶಾಂತಯ್ಯ ಪರಡಿಮಠ, ಎಂ. ಅಶೋಕ್, ಎಂ.ಎಸ್. ಚೇತನ್, ಎ. ಶಿವಕುಮಾರ್ ಉಪಸ್ಥಿತರಿದ್ದರು.

# ಜಗಳೂರಿನಲ್ಲಿ ಕಾಂಗ್ರೆಸ್ ಬೆಂಬಲಿಗರ ಸಭೆ ಟಿಕೆಟ್ ಸಿಗುವ ವಿಶ್ವಾಸವಿದೆ : ವಿನಯ್ ಕುಮಾರ್



ಜಗಳೂರು, ಮಾ. 1 - ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯಲ್ಲಿ ನನ್ನ ಹೆಸರಿದ್ದು ನನಗೇ ಟಿಕೆಟ್ ಸಿಗುವ ವಿಶ್ವಾಸವಿದೆ ಎಂದು ಪಕ್ಷದ ಲೋಕಸಭಾ ಟಿಕೆಟ್ ಆಕಾಂಕ್ಷಿ ಜಿ.ಬಿ. ವಿನಯ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕಾಂಗ್ರೆಸ್ ಪಕ್ಷದ ಬೆಂಬಲಿಗರ ಸಭೆಯಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್ ವೀಕ್ಷಕರ ಸಭೆಯಲ್ಲಿ ನನ್ನ ಪರವಾಗಿ ಮುಖಂಡರು ಮತ್ತು ಕಾರ್ಯಕರ್ತರು ಹೆಚ್ಚು ಒಲವು ವ್ಯಕ್ತಪಡಿಸಿದ್ದರೂ ಸಹ ವೀಕ್ಷಕರ ವರದಿಯಿಂದ ನನ್ನ ಹೆಸರನ್ನು ಕೈ ಬಿಡಲಾಗಿತ್ತು. ನನ್ನಂತಹ ಸಾಮಾನ್ಯನ ಬೆಳವಣಿಗೆ ಕೆಲವರಿಗೆ ಭಯ ಹುಟ್ಟಿಸಿದೆ. ಟಿಕೆಟ್ ಗಾಗಿ ನಾನು ದೆಹಲಿಯವರೆಗೆ ಏಕಾಂಗಿ ಹೋರಾಟ ನಡೆಸುತ್ತಿದ್ದೇನೆ. ನನ್ನ ಪರವಾಗಿ ಯಾವ ಶಾಸಕರೂ ಬರುತ್ತಿಲ್ಲ. ನಾನು ಹಳ್ಳಿಗಳಲ್ಲಿ ಪಾದಯಾತ್ರೆ ಮಾಡುವಾಗ ಕೆಲವರು ಪಕ್ಷದ ಮುಖಂಡರಿಗೆ ಕರೆ ಮಾಡಿ ಪಾದಯಾತ್ರೆಯಲ್ಲಿ ಭಾಗವಹಿಸಬೇಡಿ ಎಂದು ದುಂಬಾಲು ಬಿದ್ದಿರುವುದು ನನ್ನ ಗಮನಕ್ಕೆ ಬಂದಿದೆ ಎಂದರು.

ಜಗಳೂರು ತಾಲ್ಲೂಕಿಗೆ ಐಐಟಿ ಮಂಜೂರಾಗಬೇಕು ಭದ್ರಾ ಅಚ್ಚುಕಟ್ಟು ರೈತರ ಸಮಸ್ಯೆ ಪರಿಹಾರವಾಗಬೇಕು. ಏತ ನೀರಾವರಿ ಯೋಜನೆ ಶೀಘ್ರವಾಗಿ ಜಾರಿಯಾಗಬೇಕು ಎಂದು ವಿನಯ್ ಕುಮಾರ್ ಹೇಳಿದರು.

ವಕೀಲರಾದ ಮರೆನಹಳ್ಳಿ ಬಸವರಾಜ್ ಮಾತನಾಡಿ, ಜನಪರ ಕಾಳಜಿ ಹೊಂದಿರುವ ವಿದ್ಯಾವಂತ ವಿನಯ್ ಕುಮಾರ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಬೇಕು ಎಂದು ಆಗ್ರಹಿಸಿದರು.

ಸಭೆಯಲ್ಲಿ ತಾಲ್ಲೂಕು ಪಂಚಾಯತ್ ಮಾಜಿ ಅಧ್ಯಕ್ಷ ಯು.ಜಿ. ಶಿವಕುಮಾರ್, ತಾಲ್ಲೂಕು ಯಾದವ ಸಮಾಜದ ಅಧ್ಯಕ್ಷ ಹೊನ್ನಮರಡಿ ಕೃಷ್ಣಮೂರ್ತಿ, ಕಾಂಗ್ರೆಸ್ ಹಿರಿಯ ಮುಖಂಡರಾದ ಪ್ರಕಾಶ್ ರೆಡ್ಡಿ, ನರೇನಹಳ್ಳಿ ಕುಮಾರ್, ತಾನಾಜಿ ಗೋಸಾಯಿ, ನಾಗರಾಜು, ತಿಮ್ಮರಾಜು, ವಕೀಲರಾದ ಶಿವಪ್ರಕಾಶ್ ರವಿ, ಮಾರನಾಯಕ ಸೇರಿದಂತೆ ನೂರಾರು ಜನ ಬೆಂಬಲಿಗರು ಭಾಗವಹಿಸಿದ್ದರು.

# ಜಿಎಸ್ಟಿ ಸಂಗ್ರಹ ಶೇ.12.5 ಹೆಚ್ಚಳ

**(1ನೇ ಪುಟದಿಂದ)** 2023- ಫೆಬ್ರವರಿ 2024ರ ಅವಧಿಯಲ್ಲಿ ಒಟ್ಟು 18.40 ಲಕ್ಷ ಕೋಟಿ ರೂ.ಗಳ ಜಿ.ಎಸ್.ಟಿ. ಸಂಗ್ರಹವಾಗಿದೆ. ಇದು ಕಳೆದ ವರ್ಷ ಇದೇ ಅವಧಿಗೆ ಹೋಲಿಸಿದರೆ ಶೇ.11.7ರಷ್ಟು ಹೆಚ್ಚಾಗಿದೆ.

ಮಾಸಿಕ ಸರಾಸರಿ ಜಿ.ಎಸ್.ಟಿ. ಸಂಗ್ರಹ 1.67 ಲಕ್ಷ ಕೋಟಿ ರೂ. ಆಗಿದೆ. ಕಳೆದ ವರ್ಷ ಮಾಸಿಕ ಜಿ.ಎಸ್.ಟಿ. ಸಂಗ್ರಹ 1.5 ಲಕ್ಷ ಕೋಟಿ ರೂ. ಆಗಿತ್ತು.

# ನಟಿ ವಿರುದ್ಧ ಎಫ್.ಐ.ಆರ್.

**(1ನೇ ಪುಟದಿಂದ)** ಚಿತಾಳೆ, ಕಳೆದ ಐದು ವರ್ಷಗಳಲ್ಲಿ ದಾಖಲಾಗಿರುವ ಜಾತಿ ನಿಂದನೆ ಪ್ರಕರಣಗಳಲ್ಲಿ ಎಷ್ಟು ನೈಜ ಎಂಬುದನ್ನು ಪರಿಶೀಲಿಸಬೇಕು ಎಂದಿದ್ದರು. ಜಾತಿ ನಿಂದನೆ ಕಾಯ್ದೆ ದುರ್ಬಳಕೆಯು ದಂಧೆಯಾಗುತ್ತಿದೆ. ಈ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯ ಮೂಲಕ ವಿವರ ಪಡೆಯಬೇಕು ಎಂದೂ ನಟಿ ಹೇಳಿದ್ದರು. ಈ ಬಗ್ಗೆ ಪ್ರೇಮನಾಥ ಜಗತ್ಕರ್ ಎಂಬುವವರು ಪಾರ್ಲಿ ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಹಾಗೂ ಸಮುದಾಯಗಳ ನಡುವೆ ಶತ್ರುತ್ವ ತರುವ ಹೇಳಿಕೆ ನೀಡಿದ ಆರೋಪದ ಮೇಲೆ ಎಫ್.ಐ.ಆರ್. ದಾಖಲಿಸಲಾಗಿದೆ.

# ಕೇಂದ್ರದ 25 ಉನ್ನತ ಹುದ್ದೆಗಳಿಗೆ ಖಾಸಗಿ ಪರಿಣಿತರ ನೇಮಕ

ನವದೆಹಲಿ, ಮಾ. 1 - ಖಾಸಗಿ ವಲಯದ 25 ಪರಿಣಿತರು ಕೇಂದ್ರ ಸರ್ಕಾರದ ಉನ್ನತ ಹುದ್ದೆಗಳಿಗೆ ಬರಲು ಅವಕಾಶ ಕಲ್ಪಿಸಲಾಗಿದೆ.

ಕೇಂದ್ರ ಸಂಪುಟದ ನೇಮಕಾತಿಗಳ ಸಮಿತಿ ಈ ಪ್ರಸ್ತಾವನೆಗೆ ಒಪ್ಪಿಗೆ ನೀಡಿದೆ. ಇವರಲ್ಲಿ ಮೂವರು ಜಂಟಿ ಕಾರ್ಯದರ್ಶಿ ಹಾಗೂ 22 ಪರಿಣಿತರು ನಿರ್ದೇಶಕ ಸೇರಿದಂತೆ ಹಲವು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ.

ಖಾಸಗಿ ವಲಯದ ಪರಿಣಿತರು ಸರ್ಕಾರದ ಉನ್ನತ ಹುದ್ದೆಗಳಿಗೆ ನೇಮಿಸುವ ಪದ್ಧತಿಯನ್ನು ಕೇಂದ್ರ ಮೋದಿ ಸರ್ಕಾರ ಪ್ರಮುಖವಾಗಿ ಜಾರಿಗೆ ತಂದಿದೆ. ಹೊಸ ಪ್ರತಿಭೆಗಳ ಬಳಕೆ ಹಾಗೂ ಆಡಳಿತದಲ್ಲಿ ಹೊಸತನ ತರಲು ಈ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

# ಶ್ರೀ ಕ್ಷೇತ್ರ ಬಿದ್ದ ಹನುಮಪ್ಪನಮಟ್ಟಿಯಲ್ಲಿ ಕೊಟ್ಟೂರು ಪಾದಯಾತ್ರಿಗಳಿಗೆ ಪ್ರಸಾದ ವ್ಯವಸ್ಥೆ

ಹರಪನಹಳ್ಳಿ ತಾಲ್ಲೂಕಿನ ಕಂಚಿಕೆರೆ-ಅರಸಿಕೆರೆ ರಸ್ತೆ ಬದಿಯ ಶ್ರೀಕ್ಷೇತ್ರ ಬಿದ್ದ ಹನುಮಪ್ಪನಮಟ್ಟಿ ಶ್ರೀ ವೀರಾಂಜನೇಯ ಮಹಾಸ್ವಾಮಿ ದೇವಾಲಯದ ಆವರಣದಲ್ಲಿ ಮಾರ್ಚ್ 1 ಮತ್ತು 2 ರಂದು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ದರ್ಶನಕ್ಕೆ ತೆರಳುವ ಸಮಸ್ತ ಪಾದಯಾತ್ರಿಗಳಿಗೆ ದೇವಸ್ಥಾನ ಸಮಿತಿ ಟ್ರಸ್ಟ್ ಹಾಗೂ ಪೂಜ್ಯರಾದ ಶ್ರೀ ಬಸವರಾಜ ಗುರೂಜಿಯವರು ಪ್ರಸಾದದ ವ್ಯವಸ್ಥೆ ಮಾಡಿರುತ್ತಾರೆ.


ಶ್ರೀ ವೀರಭದ್ರೇಶ್ವರ ಸ್ವಾಮಿ ಪ್ರಸನ್ನ

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



**ಶ್ರೀಮತಿ ಪುಷ್ಪಲತಾ ಮತ್ತು ಮಕ್ಕಳು** 9ನೇ ಕ್ರಾಸ್, ಬಾಪೂಜಿ ಎಂ.ಬಿ.ಎ. ಕಾಲೇಜ್ ಹತ್ತಿರ, ಎಸ್.ಎಸ್. ಬಡಾವಣೆ, ದಾವಣಗೆರೆ - 04, ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 23.02.2024ನೇ ಶುಕ್ರವಾರ ಬೆಳಿಗ್ಗೆ 6 ಗಂಟೆಗೆ ನನ್ನ ಪೂಜ್ಯ ಪತಿಯವರಾದ

**ಶ್ರೀ ತರೇದಹಳ್ಳಿ ನಿಜಲಿಂಗಯ್ಯ ಹನಗೋಡಿಮಠ**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ **ಕೈಲಾಸ ಶಿವಗಣಾರಾಧನೆ**ಯನ್ನು ದಿನಾಂಕ 02.03.2024ನೇ ಶನಿವಾರ ಮಧ್ಯಾಹ್ನ 12 ಗಂಟೆಗೆ ನಿಮಿಷಾಂಬ ಕಲ್ಯಾಣ ಮಂಟಪ ರಿಂಗ್ ರಸ್ತೆ, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ - 4, ಇಲ್ಲಿ ನೆರವೇರಿಸಲಿದ್ದು ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು : ಶ್ರೀಮತಿ ಪುಷ್ಪಲತಾ ಮತ್ತು ಮಕ್ಕಳು, ಮೊಮ್ಮಕ್ಕಳು ಮತ್ತು ಬಂಧು-ಮಿತ್ರರು, 99455 80349, 96207 73607**

ವಿಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

॥ ಶ್ರೀ ಉಚ್ಚಂಗೆಮ್ಮ ದೇವಿ ಪ್ರಸನ್ನ ॥ ॥ ಶ್ರೀ ಗೋಣಿ ಬಸವೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ಜನನ : 06-04-1955 ನಿಧನ : 24-02-2024

ದಾವಣಗೆರೆ ನಗರ ಎಸ್. ನಿಜಲಿಂಗಪ್ಪ ಬಡಾವಣೆ ವಾಸಿ, **ಶ್ರೀಮತಿ ಗೀತಮ್ಮ ಮತ್ತು ಮಕ್ಕಳು** ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ : 24-02-2024ನೇ ಶನಿವಾರ ರಾತ್ರಿ 11.36 ಕ್ಕೆ ನನ್ನ ಪೂಜ್ಯ ಪತಿಯವರಾದ

**ಡಾ॥ ಟಿ. ಪರಶುರಾಮಪ್ಪನವರು**

ಚಿಗಟೇರಿ ಜಿಲ್ಲಾಸ್ಪತ್ರೆ ನಿವೃತ್ತ ಅಧೀಕ್ಷಕರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 03-03-2024ನೇ ಭಾನುವಾರ ಬೆಳಿಗ್ಗೆ 11:30 ಕ್ಕೆ ಮೃತರ ಸ್ವಗೃಹ, 'ಹೊಂಗಿರಣ' # 98, ನ್ಯಾಷನಲ್ ಕಾನ್ವೆಂಟ್ ಶಾಲೆಯ ಹಿಂಭಾಗ, ಲಕ್ಷ್ಮಿಫ್ಲೋರ್ ಮಿಲ್ ಹತ್ತಿರ, ಎಸ್. ನಿಜಲಿಂಗಪ್ಪ ಬಡಾವಣೆ ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಮೃತರ ಧರ್ಮಪತ್ನಿ ಶ್ರೀಮತಿ ಗೀತಮ್ಮ ಮತ್ತು ಮಕ್ಕಳು, ಕುಟುಂಬದವರು ತೋಟದ ದುಗ್ಗಪ್ಪ ನಾಗಮ್ಮ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. : 98456 01557**

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

॥ ಶ್ರೀ ಬೀರಲಿಂಗೇಶ್ವರ ಪ್ರಸನ್ನ ॥ ॥ ಶ್ರೀ ಹೊನ್ನಮ್ಮದೇವಿ ಪ್ರಸನ್ನ ॥


**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ಸಿಟಿ ಹೊಂಡದ ರಸ್ತೆ ವಾಸಿ **ಶ್ರೀಮತಿ, ಶ್ರೀ ಜೆ.ಕೆ. ಕರಿಬಸಪ್ಪ ಮತ್ತು ಸಹೋದರರು** ಇವರು ಮಾಡುವ ವಿಜ್ಞಾಪನೆಗಳು.

ಆತ್ಮೀಯ ಬಂಧುಗಳೇ, ದಿನಾಂಕ 24-02-2024ನೇ ಶನಿವಾರ, ಸಂಜೆ 5-35 ಕ್ಕೆ ನನ್ನ ಸಹೋದರನಾದ

**ಶ್ರೀ ಜೋಗಪ್ಪನವರ ಕೊಟ್ರಬಸಪ್ಪ**

ಮಾಜಿ ನಗರ ಸಭಾ ಸದಸ್ಯರು, ಶ್ರೀ ದುರ್ಗಾಂಬಿಕಾ ದೇವಸ್ಥಾನದ ಧರ್ಮದರ್ಶಿಗಳು ಹಾಗೂ ಕಾರ್ಯದರ್ಶಿಗಳು, ಶ್ರೀ ಬೀರಲಿಂಗೇಶ್ವರ ಜಾಗದ ಟ್ರಸ್ಟ್ ಶ್ರೀ ಕ್ಷೇತ್ರ ಐರಣಿ ಹೊಳೆ ಮಠದ ಸೇವಾ ಕರ್ತರು



ಜನನ : 04-03-1949 ಮರಣ : 24-02-2024

ಇವರು ಲಿಂಗೈಕ್ಯರಾದ ಪ್ರಯುಕ್ತ ತತ್ಸಂಬಂಧ **'ಕೈಲಾಸ ಸಮಾರಾಧನೆ'** ಯನ್ನು **ದಿನಾಂಕ 03-03-2024ನೇ ಭಾನುವಾರ, ಬೆಳಿಗ್ಗೆ 11-30 ಗಂಟೆಗೆ ಶ್ರೀ ಬೀರೇಶ್ವರ ಭವನ, ದೇವರಾಜ ಅರಸ್ ಬಡಾವಣೆ, ದಾವಣಗೆರೆ ಇಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಮೃತರ ಧರ್ಮಪತ್ನಿ ಶ್ರೀಮತಿ ಲಕ್ಕಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಜೋಗಪ್ಪನವರ ವಂಶಸ್ಥರು, ತಾಳಿ ವೀರಕೆಂಚಪ್ಪನವರ ವಂಶಸ್ಥರು ಹಾಗೂ ಅಪಾರ ಬಂಧು-ಮಿತ್ರರು. ಮೊ. : 9844353530, 9980344441.**

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**ಭಾವಪೂರ್ಣ ಶ್ರದ್ಧಾಂಜಲಿ**



ದಾವಣಗೆರೆಯ ಜ.ಜ.ಮು. ವೈದ್ಯಕೀಯ ಮಹಾವಿದ್ಯಾಲಯದ ಅರಿವಳಿಕೆ ವಿಭಾಗದ ನಿವೃತ್ತ ಮುಖ್ಯಸ್ಥರೂ, ಪ್ರಾಧ್ಯಾಪಕರೂ ನಮ್ಮ ಆತ್ಮೀಯರೂ ಆಗಿದ್ದ

**ಡಾ. ಮಂಜುನಾಥ್ ಜಾಜೂರು**

ಅವರು ದಿನಾಂಕ 01.03.2024ರಂದು ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರ ಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನದಲ್ಲಿ ಪ್ರಾರ್ಥನೆ.

**ಡಾ. ಜೆ.ಸಿ. ಬಸವರಾಜ್**
ಕೀಲು-ಮೂಳೆ ಚಿಕಿತ್ಸಾ ವಿಭಾಗದ ಪ್ರಾಧ್ಯಾಪಕರು
**ಶಿಲ್ಪಾ ಡಯಾಗ್ನೋಸ್ಟಿಕ್ ಸೆಂಟರ್**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಸಂದೇಶ್‌ಖಾಲಿ : ಪಶ್ಚಿಮ ಬಂಗಾಳ ಸರ್ಕಾರಕ್ಕೆ ಪ್ರಧಾನಿ ತರಾಟೆ**
ಆರಂಭಾಗ್ : ಸಂದೇಶ್‌ಖಾಲಿಯಲ್ಲಿ ದಲಿತ ಮಹಿಳೆಯರ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಈ ಘಟನೆಯಿಂದ ಇಡೀ ದೇಶ ನಾಚಿಕೊಳ್ಳುವಂತಾಗಿದೆ ಎಂದಿದ್ದಾರೆ.

**ಉತ್ತರ ಪ್ರದೇಶದಲ್ಲಿ ಜಂಗಲ್ ರಾಜ್ : ರಾಹುಲ್ ಗಾಂಧಿ**
ನವದೆಹಲಿ : ಉತ್ತರ ಪ್ರದೇಶದಲ್ಲಿ ಈಗ ಡಬಲ್ ಇಂಜಿನ್ ಸರ್ಕಾರವಿಲ್ಲ. ಅಲ್ಲೀಗ ಜಂಗಲ್ ರಾಜ್ ಇದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ. ರಾಜ್ಯದ ಕಾನೂನು ವ್ಯವಸ್ಥೆಗೆ ಸಂಬಂಧಿಸಿದಂತೆ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದೂ ಅವರು ತಿಳಿಸಿದ್ದಾರೆ.

**ದೆಹಲಿ ತಲಾ ವರಮಾನ ಶೇ.22ರಷ್ಟು ಹೆಚ್ಚಳ**
ನವದೆಹಲಿ : ರಾಜಧಾನಿ ದೆಹಲಿಯ ತಲಾ ವರಮಾನ ಎರಡು ವರ್ಷಗಳಲ್ಲಿ ಶೇ.22ರಷ್ಟು ಹೆಚ್ಚಾಗಿ 4.61 ಲಕ್ಷ ರೂ.ಗಳಿಗೆ ತಲುಪಿದೆ ಎಂದು ದೆಹಲಿ ಹಣಕಾಸು ಸಚಿವೆ ಆತಿಶಿ ಮರ್ಲೀನ ಹೇಳಿದ್ದಾರೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ.9.17ರ ಬೆಳವಣಿಗೆಯಾಗಿದೆ ಎಂದೂ ಅವರು ತಿಳಿಸಿದ್ದಾರೆ.

**ಅಸಾರಾಂ ಬಾಪು ಶಿಕ್ಷೆ ತಡೆಗೆ ಸುಪ್ರೀಂ ಕೋರ್ಟ್ ನಕಾರ**
ನವದೆಹಲಿ : ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಅಸಾರಾಂ ಬಾಪುಗೆ ಪರಿಹಾರ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಅನಾರೋಗ್ಯದ ಹಿನ್ನೆಲೆಯಲ್ಲಿ ಜೀವಾವಧಿ ಶಿಕ್ಷೆಗೆ ತಡೆ ನೀಡಬೇಕು ಎಂದು ಅಸಾರಾಂ ಬಾಪು ಪರ ವಕೀಲರು ಅರ್ಜಿ ದಾಖಲಿಸಿದ್ದರು.

**ಪೇಟಿಎಂ ಪೇಮೆಂಟ್ ಬ್ಯಾಂಕ್‌ಗೆ 5.49 ಕೋಟಿ ರೂ. ದಂಡ**
ನವದೆಹಲಿ : ಅಕ್ರಮ ಹಣ ತಡೆ ಕಾಯ್ದೆ ಉಲ್ಲಂಘಿಸಿದ ಆರೋಪದ ಮೇಲೆ ಪೇಟಿಎಂ ಪೇಮೆಂಟ್ ಬ್ಯಾಂಕ್‌ಗೆ 5.49 ಕೋಟಿ ರೂ.ಗಳ ದಂಡ ವಿಧಿಸಲಾಗಿದೆ. ಹಣಕಾಸು ಗುಪ್ತಚರ ದಳವು ಈ ದಂಡ ವಿಧಿಸಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

**ಪಾವತಿ ವಿವಾದ : ಗೂಗಲ್‌ನಿಂದ ಆಪ್‌ಗಳಿಗೆ ಕತ್ತರಿ**
ನವದೆಹಲಿ : ಶುಲ್ಕ ಪಾವತಿ ವಿವಾದದ ಹಿನ್ನೆಲೆಯಲ್ಲಿ ಜನಪ್ರಿಯ ಮದುವೆ ಆಪ್‌ಗಳೂ ಸೇರಿದಂತೆ ಹಲವಾರು ಆಪ್‌ಗಳನ್ನು ಗೂಗಲ್‌ನ ಪ್ಲೇ ಸ್ಟೋರ್‌ನಿಂದ ತೆಗೆದು ಹಾಕಲಾಗುತ್ತಿದೆ.

**ಬಾಂಗ್ಲಾ : ಏಳು ಅಂತಸ್ತಿನ ವ್ಯಾಪಾರಿ ಮಾಲ್‌ನಲ್ಲಿ ಬೆಂಕಿ, 46 ಸಾವು**
ಢಾಕಾ : ಬಾಂಗ್ಲಾದೇಶದ ಏಳು ಅಂತಸ್ತಿನ ವ್ಯಾಪಾರಿ ಮಳಿಗೆಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಕನಿಷ್ಠ 46 ಜನ ಸಾವನ್ನಪ್ಪಿದ್ದಾರೆ. ಈ ಕಟ್ಟಡದಲ್ಲಿ ಹಲವು ಕಾನೂನು ಬಾಹಿರ ಭೋಜನ ತಾಣಗಳಿದ್ದವು. ಅವಘಡದಲ್ಲಿ 22 ಜನ ಗಾಯಗೊಂಡಿದ್ದಾರೆ. ಇದು ಬಾಂಗ್ಲಾದಲ್ಲಿ ಇತ್ತೀಚೆಗೆ ನಡೆದ ಅತ್ಯಂತ ತೀವ್ರ ಸ್ವರೂಪದ ಅಗ್ನಿ ಅವಘಡವಾಗಿದೆ.

**ಮೊಬೈಲ್ ಸೇವಾ ದರ ಹೆಚ್ಚಿಸಲು ಏರ್‌ಟೆಲ್ ಇಂಗಿತ**
ನವದೆಹಲಿ : ಸಂದರ್ಭ ಬಂದಾಗ ಮೊಬೈಲ್ ಸೇವೆಗಳ ದರ ಹೆಚ್ಚಿಸಲು ಹಿಂಜರಿಯುವುದಿಲ್ಲ ಎಂದು ಏರ್‌ಟೆಲ್ ಸಂಸ್ಥೆ ಮುಖ್ಯಸ್ಥರಾದ ಸುನೀಲ್ ಭಾರತಿ ಮಿತ್ತಲ್ ಹೇಳಿದ್ದಾರೆ. 5ಜಿ ಸೇವೆಗಾಗಿ ಏರ್‌ಟೆಲ್ 80 ಸಾವಿರ ಕೋಟಿ ರೂ. ವೆಚ್ಚ ಮಾಡಿದೆ.


# ಮಲೇಬೆನ್ನೂರಿನಿಂದ ಕೊಟ್ಟೂರಿಗೆ ಪಾದಯಾತ್ರೆ

ಮಲೇಬೆನ್ನೂರು, ಮಾ. 1 - ಕೊಟ್ಟೂರು ಶ್ರೀ ಗುರು ಬಸವೇಶ್ವರ ಸ್ವಾಮಿಯ ರಥೋತ್ಸವಕ್ಕೆ ಮಲೇಬೆನ್ನೂರಿನ ಭಕ್ತರು ಗುರುವಾರ ಸಂಜೆ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಪಾದಯಾತ್ರೆ ಆರಂಭಿಸಿದರು.

ಸತೀಶ್, ಕೆ.ಬಿ. ರಾಜು, ಮುದೇಗೌಡ್ರ ರಾಜು, ಬಸವರಾಜ್, ಪ್ರಶಾಂತ್, ದೀಪು, ಶಿವು, ಅಭಿ, ಮಂಜು ಇನ್ನು ಮುಂತಾದವರು ಪಾದಯಾತ್ರೆಯಲ್ಲಿದ್ದಾರೆ.



# ಜಾತಿ ಸಮೀಕ್ಷೆಯಿಂದ ಅಶಾಂತಿ



**ಈಗ ಕೊಟ್ಟಿರುವ ವರದಿ ಚೌಚೌ ವರದಿ. ಮಾಹಿತಿ ಕಾಂತರಾಜ ಅವರದು, ಜಯಪ್ರಕಾಶ್ ಹೆಗ್ಡೆ ಅವರು ವರದಿ ನನ್ನದು ಅಂತ ಹೇಳಿದ್ದಾರೆ. ಜಯಪ್ರಕಾಶ್ ಹೆಗ್ಡೆ ಅವರ ಆಯೋಗ ಅಧ್ಯಕ್ಷ ಸ್ಥಾನದ ಅಧಿಕಾರವಧಿ ವಿಸ್ತರಿಸಿ ರಾಜಕೀಯ ಕಾರಣಕ್ಕೆ ವರದಿ ಪಡೆದಿದ್ದಾರೆ**

ಬೆಂಗಳೂರು, ಮಾ. 1 - ಜಾತಿ ಸಮೀಕ್ಷೆ ವರದಿ ಸ್ವೀಕರಿಸುವ ಮೂಲಕ ಸರ್ಕಾರ ಬೆಂಕಿಯ ಜೊತೆ ಆಟವಾಡಲು ಹೊರಟಿದ್ದು, ಸಮಾಜದಲ್ಲಿ ಅಶಾಂತಿಗೆ ಕಾರಣವಾಗಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆ ಹತ್ತಿರ ಬಂದಾಗ ಜಾತ್ಯತೀತ ಎಂದು ಕರೆದುಕೊಳ್ಳುವ ಕಾಂಗ್ರೆಸ್ ಪಕ್ಷಕ್ಕೆ ಜಾತಿಗಳ ಮೇಲೆ ಪ್ರೀತಿ ಬಂದಿದೆ, ಜಾತಿ ಸಮಾವೇಶ ನಡೆಸುವುದು, ಸುಳ್ಳು ಆಶ್ವಾಸನೆ ಕೊಡುವುದನ್ನು ಮಾಡುತ್ತಿದೆ ಎಂದರು.

2017ರಲ್ಲಿ ರಾಜ್ಯದಲ್ಲಿನ ಎಲ್ಲ ಜಾತಿಗಳ ಶಿಕ್ಷಣ ಮತ್ತು ಸಾಮಾಜಿಕ ಮಟ್ಟದ ಅಧ್ಯಯನ ನಡೆಸಲು ಸೂಚಿಸಿದ್ದರು. ಆಗ ಅವರ ಉದ್ದೇಶ ಬೇರೆ ಇತ್ತು. ಜಾತಿ ಗಣತಿ ನಡೆಸುವ ಅಧಿಕಾರ ಯಾರಿಗಿದೆ ಎಂಬ ವಿವಾದ ಸುಪ್ರೀಂ ಕೋರ್ಟ್ ಮುಂದಿದೆ.

ಇದರ ಕಣ್ತಪ್ಪಿಸಲು ಶೈಕ್ಷಣಿಕ, ಸಾಮಾಜಿಕ ಅಧ್ಯಯನ ಅಂತ ಹೇಳುವ ಮೂಲಕ ಉದ್ದೇಶ ಒಂದು, ಆದೇಶ ಒಂದು ಆಗಿ ಗೊಂದಲ ಸೃಷ್ಟಿಯಾಯಿತು.

ಕಾಂತರಾಜ ವರದಿ ಸಿದ್ಧವಾದಾಗ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿದ್ದರು. ಆಗ ಚುನಾವಣೆ ಇದ್ದ ಕಾರಣ ವರದಿ ಸ್ವೀಕಾರ ಮಾಡಲಿಲ್ಲ, ಆಗಲೂ ವರದಿಯ ಬಗ್ಗೆ ಸಾಕಷ್ಟು ಗೊಂದಲಗಳಿದ್ದವು. ಈಗ ಕೊಟ್ಟಿರುವ ವರದಿಯಲ್ಲಿಯೂ ಗೊಂದಲ ಇದೆ.

ವರದಿಯಲ್ಲಿ 5.82 ಕೋಟಿ ಜನರನ್ನು ಸಂಪರ್ಕ ಮಾಡಿದ್ದೇವೆ ಎನ್ನುತ್ತಾರೆ. ಆದರೆ, ಬಹುತೇಕ ಜನರು ತಮ್ಮನ್ನು ಸಂಪರ್ಕ ಮಾಡಿಲ್ಲ ಎಂದು ಹೇಳುತ್ತಿದ್ದಾರೆ.

ಈಗ ಕೊಟ್ಟಿರುವ ವರದಿ ಚೌಚೌ ವರದಿ. ಮಾಹಿತಿ ಕಾಂತರಾಜ ಅವರದು, ಜಯಪ್ರಕಾಶ್ ಹೆಗ್ಡೆ ಅವರು ವರದಿ ನನ್ನದು ಅಂತ ಹೇಳಿದ್ದಾರೆ.

ಜಯಪ್ರಕಾಶ್ ಹೆಗ್ಡೆ ಅವರ ಆಯೋಗ ಅಧ್ಯಕ್ಷ ಸ್ಥಾನದ ಅಧಿಕಾರವಧಿ ವಿಸ್ತರಿಸಿ ರಾಜಕೀಯ ಕಾರಣಕ್ಕೆ ವರದಿ ಪಡೆದಿದ್ದಾರೆ ಎಂದು ಆರೋಪಿಸಿದರು.

ಜಾತಿ ಸಮೀಕ್ಷೆಗೆ ವಿರೋಧವಿಲ್ಲ, ಜಾತಿ ಗಣತಿ ಜೊತೆ ಆರ್ಥಿಕ, ಸಾಮಾಜಿಕ ಸ್ಥಿತಿಗತಿ ಮೇಲೆತ್ತಬೇಕು ಎನ್ನುವ ಬದ್ಧತೆ ನಮಗಿದೆ, ಅದಕ್ಕಾಗಿಯೇ ಎಸ್ಸಿ, ಎಸ್ಟಿ ಮೀಸಲಾತಿ ಹೆಚ್ಚಳವನ್ನು ನಾವು ಮಾಡಿದ್ದೇವೆ. ಈಗ ಸ್ವೀಕರಿಸಿದ ವರದಿ ಬಗ್ಗೆ ಸರ್ಕಾರ ಏಕೆ ಮುಚ್ಚು ಮರೆ ಮಾಡುತ್ತಿದೆ, ಇದರ ಬಗ್ಗೆ ಮುಕ್ತ ಚರ್ಚೆಯಾಗಬೇಕು ಎಂದು ಬೊಮ್ಮಾಯಿ ಹೇಳಿದರು.

ಹಿಂದುಳಿದ ವರ್ಗದಡಿ 150 ಜಾತಿಗಳನ್ನು ಸೇರಿಸಿದ್ದಾರೆ, ಅವರ ಮೀಸಲಾತಿ ಬಗ್ಗೆ ಚರ್ಚೆಯಾಗಬೇಕು. ಹಿಂದುಳಿದವರಲ್ಲಿ ಅತಿ ಹಿಂದುಳಿದ, ಕಟ್ಟಕಡೆಯ ಸಮುದಾಯಗಳಿಗೆ ಮೀಸಲಾತಿ ಪ್ರಯೋಜನ ಸಿಗುತ್ತಿಲ್ಲ. ಅವರಿಗೂ ಸೌಲಭ್ಯ ಸಿಗಬೇಕು.

ಮುಖ್ಯಮಂತ್ರಿ ಅವರು ಇದನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು, ಅದು ಅಕ್ಷಮ್ಯ ಅಪರಾಧ ಎಂದರು. ಸರ್ಕಾರದ ನಡವಳಿಕೆಯಿಂದ ಸಮಾಜದಲ್ಲಿ ಅಶಾಂತಿ ಮೂಡುತ್ತಿದೆ, ಸಂಪುಟದ ಸಚಿವರೇ ಅಪಸ್ವರ ಎತ್ತಿದ್ದಾರೆ, ಸಂಪುಟದಲ್ಲಿ ಒಗ್ಗಟ್ಟಿಲ್ಲವೇ, ಬದ್ಧತೆ ಇಲ್ಲವೇ.

ಜಾತಿ ಸಮೀಕ್ಷೆ ವಿಚಾರದಲ್ಲಿ ಸರ್ಕಾರ ಡಬಲ್ ಗೇಮ್ ಆಡುತ್ತಿದೆ. ಚಿವುಟುವವರೂ ಇವರೇ, ರಮಿಸುವವರೂ ಇವರೇ ಆಗಿದ್ದಾರೆ. ಬಡವರು, ತುಳಿತಕ್ಕೊಳಗಾದವರ ಜೊತೆ ಆಟ ಆಡುವುದು ಸರಿಯಲ್ಲ. ಸಮಾಜದಲ್ಲಿ ಗೊಂದಲ ಉಂಟು ಮಾಡುವ ಕೆಲಸ ಮಾಡಬೇಡಿ ಎಂದರು.

ರಾಜ್ಯ ಸರ್ಕಾರ ಸ್ವೀಕಾರ ಮಾಡಿರುವ ವರದಿಯಲ್ಲಿ 70 ಲಕ್ಷ ಜನ ಮುಸ್ಲಿಮರಿದ್ದಾರೆ ಎಂಬ ಮಾಹಿತಿ ಸೋರಿಕೆಯಾಗಿದೆ. ರಾಜ್ಯದ ಬಹುಸಂಖ್ಯಾತ ಜಾತಿಗಳಿಗಿಂತ ಮುಸ್ಲಿಮ್ ಹೆಚ್ಚಿನ ಜನಸಂಖ್ಯೆ ಇದ್ದಾರೆ ಎಂದಾದರೆ ಅವರು ಹೇಗೆ ಅಲ್ಪಸಂಖ್ಯಾತರಾಗುತ್ತಾರೆ? ಸರ್ಕಾರ ಇದಕ್ಕೆ ಉತ್ತರ ಕೊಡಬೇಕು ಎಂದು ಆಗ್ರಹಿಸಿದರು.

ಪಾಕ್ ಪರ ಘೋಷಣೆ ಕೂಗಿರುವುದು ಎಫ್‌ಎಸ್‌ಎಲ್ ವರದಿಯಲ್ಲಿ ಸ್ಪಷ್ಟವಾಗಿದೆ ಎಂಬ ಮಾಹಿತಿ ಇದೆ, ಘೋಷಣೆ ಕೂಗಿದವರು ಭಯೋತ್ಪಾದಕರಿಗೆ ಸಹಕಾರ ನೀಡಿದ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋಪಗಳಿವೆ, ಸರ್ಕಾರ ಯಾವ ಕಾರಣಕ್ಕೆ ವರದಿ ಮುಚ್ಚಿಡಲು ಪ್ರಯತ್ನ ಮಾಡುತ್ತಿದೆ ಎಂದು ಪ್ರಶ್ನಿಸಿದರು.

# ಜನತೆಗೆ ತಪ್ಪು ಸಂದೇಶ ನೀಡಲು ಬಜೆಟ್ ಅಧಿವೇಶನ ಬಳಕೆ

**ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕೋಟ ಶ್ರೀನಿವಾಸ ಪೂಜಾರಿ ಆರೋಪ**

ಬೆಂಗಳೂರು, ಮಾ. 1 - ರಾಜ್ಯದ ಜನತೆಗೆ ತಪ್ಪು ಸಂದೇಶ ನೀಡಲು ಮತ್ತು ಸುಳ್ಳು ಹೇಳಲು ರಾಜ್ಯಪಾಲರ ಭಾಷಣ ಮತ್ತು ಬಜೆಟ್ ಅಧಿವೇಶನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಸಿಕೊಂಡಿದ್ದಾರೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿ 60 ಗಂಟೆ ಆಗಿದ್ದರೂ ಆರೋಪಿಗಳ ಬಂಧನ ಮಾಡದೆ, ದೇಶದ್ರೋಹಿಗಳಿಗೆ ಪರೋಕ್ಷ ಬೆಂಬಲ ಕೊಡುವ ಎಲ್ಲ ಕೆಲಸಗಳನ್ನು ಮುಖ್ಯಮಂತ್ರಿ, ಗೃಹಸಚಿವರು ಮತ್ತು ಇಡೀ ಸಚಿವ ಸಂಪುಟ ಮಾಡುತ್ತಿದೆ ಎಂದರು.

ದೇಶ ಮೊದಲು ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಳ್ಳುತ್ತಿಲ್ಲ. ಪಾಕಿಸ್ತಾನ ನೆರೆರಾಷ್ಟ್ರ, ಶತ್ರು ರಾಷ್ಟ್ರವಲ್ಲ ಎಂದು ಕಾಂಗ್ರೆಸ್ ನಾಯಕರು ಸಮರ್ಥಿಸಿಕೊಳ್ಳುತ್ತಾರೆ, ಈ ಕುರಿತು ರಾಜ್ಯಪಾಲರಿಗೆ ದೂರು ನೀಡಿದ್ದೇವೆ ಎಂದು ಪೂಜಾರಿ ಹೇಳಿದ್ದಾರೆ.

ವಿಧಾನಸೌಧದಲ್ಲೇ ಭಾರತ ವಿರೋಧಿ ಘೋಷಣೆ ಕೂಗಿದ್ದರ ಕುರಿತು ರಾಜ್ಯಪಾಲರು ಅಚ್ಚರಿ ವ್ಯಕ್ತಪಡಿಸಿದ್ದಾರೆ, ತನಿಖೆ ಮಾಡಿ ಕ್ರಮ ಕೈಗೊಳ್ಳುವ ಕುರಿತು ಪರಿಶೀಲಿಸುವುದಾಗಿ ತಿಳಿಸಿದ್ದಾರೆ. ಪ್ರಕರಣದ ವಿಡಿಯೋ ಕುರಿತ ಎಫ್‌ಎಸ್‌ಎಲ್ ವರದಿ ಸರ್ಕಾರದ ಕೈಸೇರಿದೆ, ಪಾಕ್ ಪರ ಘೋಷಣೆ ವಿಚಾರವೂ ದೃಢೀಕರಣಗೊಂಡಿದೆ ಎಂಬ ಮಾಹಿತಿ ಲಭ್ಯವಿದೆ, ಇಷ್ಟಾದರೂ ಆರೋಪಿಗಳನ್ನು ಬಂಧಿಸಿಲ್ಲ ಎಂದು ಆರೋಪಿಸಿದರು.

ರಾಜ್ಯಸಭಾ ಚುನಾವಣೆಯಲ್ಲಿ ಗೆಲುವು ಕಂಡ ನಾಸೀರ್ ಹುಸೇನ್ ಮಾಧ್ಯಮದವರಿಗೆ ಬೆದರಿಕೆ ಹಾಕಿದ್ದು ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗದ ಜೊತೆ ಪತ್ರಿಕಾರಂಗವನ್ನೂ ದಬ್ಬಾಳಿಕೆ ಮೂಲಕ ಪ್ರತಿಬಂಧಿಸಿ, ಮತ್ತೊಮ್ಮೆ ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿಯ ವಾತಾವರಣ ನಿರ್ಮಾಣವಾಗಿದೆ ಎಂದು ಟೀಕಿಸಿದರು.

ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಪ್ರತಿ ತಿಂಗಳು 22 ಲಕ್ಷ ಕ್ವಿಂಟಾಲ್ ಅಕ್ಕಿ ಬರುತ್ತದೆ, ಬಿಪಿಎಲ್ ಪಡಿತರ ಚೀಟಿಯವರಿಗೆ 5 ಕೆಜಿಯಂತೆ ನೀಡಲಾಗುತ್ತಿದೆ, ಮೊದಲು ಗೋಣಿಚೀಲದ ವೆಚ್ಚ ಕೊಡಬೇಕಿತ್ತು, ಈಗ ಸಾಗಾಟ ಸೇರಿ ಪೂರ್ಣ ವೆಚ್ಚವನ್ನು ಕೇಂದ್ರವೇ ಕೊಡುತ್ತಿದೆ, ಕೇಂದ್ರದ ಅಕ್ಕಿ ಕೊಡುತ್ತಿರುವುದಾಗಿ ಜನತೆಗೆ ತಿಳಿಸುತ್ತಿಲ್ಲ, ಪಡಿತರ ಅಕ್ಕಿಯ ಹಣ ಕೇವಲ ಶೇ.50 ಜನರಿಗಷ್ಟೇ ಸಿಗುತ್ತಿದೆ ಎಂದರು.

# ಜ್ಞಾನವಾಪಿ ಸ್ವರೂಪ : ಸುಪ್ರೀಂ ಕೋರ್ಟ್‌ನಿಂದ ವಿಚಾರಣೆ

ನವದೆಹಲಿ, ಮಾ. 1 - ಜ್ಞಾನವಾಪಿ ಸಂಕೀರ್ಣದ ಸ್ವರೂಪಕ್ಕೆ ಸಂಬಂಧಿಸಿದಂತೆ ಅಲಹಾಬಾದ್ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಜ್ಞಾನವಾಪಿ ಮಸೀದಿ ನಿರ್ವಹಣಾ ಸಮಿತಿಯು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದೆ.

ಈ ವಿಷಯವನ್ನು ಮುಖ್ಯ ಪ್ರಕರಣದ ಜೊತೆ ವಿಚಾರಣೆ ನಡೆಸಲಾಗುವುದು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ.ಪರ್ದಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ತಿಳಿಸಿದೆ.

ಜ್ಞಾನವಾಪಿ ಮಸೀದಿ ನಿರ್ವಹಿಸುವ ಅಂಜುಮನ್ ಇಂತೆಜಾಮಿಯಾ ಮಸೀದಿ ಸಮಿತಿಯು ಈ ಅರ್ಜಿಯನ್ನು ದಾಖಲಿಸಿದೆ.

ಜ್ಞಾನವಾಪಿ ಸಂಕೀರ್ಣದಲ್ಲಿ ದೇವಾಲಯ ನೆಲೆಗೊಳಿಸಬೇಕು ಎಂದು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. 1991ರ ಕಾಯ್ದೆಯ ಅನ್ವಯ ಸ್ಥಳವೊಂದರ ಧಾರ್ಮಿಕ ಸ್ವರೂಪವನ್ನು ನ್ಯಾಯಾಲಯ ನಿರ್ಧರಿಸಬೇಕು ಎಂದು ಹೈಕೋರ್ಟ್ ತಿಳಿಸಿತ್ತು.

ಜ್ಞಾನವಾಪಿ ಸಂಕೀರ್ಣದ ಸ್ವರೂಪವನ್ನು ತಿಳಿಯಲು ಸಮೀಕ್ಷೆಗೂ ಆದೇಶ ಹೊರಡಿಸಲಾಗಿತ್ತು. ಈ ಸಮೀಕ್ಷೆ ಪ್ರಶ್ನಿಸಿ ದಾಖಲಿಸಿದ್ದ ಐದು ಅರ್ಜಿಗಳನ್ನು ಹೈಕೋರ್ಟ್ ತಳ್ಳಿ ಹಾಕಿತ್ತು.

1991ರ ಆರಾಧನಾ ಸ್ಥಳಗಳ ಕಾಯ್ದೆಯ ಪ್ರಕಾರ ಯಾವುದೇ ಸ್ಥಳದ ಧಾರ್ಮಿಕ ಸ್ವರೂಪವನ್ನು 1947ರ ಆಗಸ್ಟ್ 15ರಲ್ಲಿ ಇರುವುದಕ್ಕಿಂತ ಬದಲಿಸುವಂತಿಲ್ಲ. ಈ ಕಾಯ್ದೆಯು ಹಿಂದೂಗಳು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲು ಅಡ್ಡಿಯಾಗುವುದಿಲ್ಲ ಎಂದು ಹೈಕೋರ್ಟ್ ಹೇಳಿತ್ತು.

ಕಾಶಿ ವಿಶ್ವನಾಥ ದೇವಾಲಯದ ಪಕ್ಕದಲ್ಲಿರುವ ಜ್ಞಾನವಾಪಿ ಸಂಕೀರ್ಣದಲ್ಲಿ ಪೂಜೆ ಸಲ್ಲಿಸಲು ಅನುಮತಿ ನೀಡಬೇಕೆಂದು ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಲಾಗಿತ್ತು.

## ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ದಾವಣಗೆರೆ, ಮಾ.1- ನಗರದ ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ಸಾಮಾನ್ಯ ಸದಸ್ಯತ್ವ ಪಡೆಯಲು ಅರ್ಜಿ ಸಲ್ಲಿಸುವ ಅವಧಿಯನ್ನು 30 ದಿನ ಮುಂದುವರೆಸಲಾಗಿದೆ. ಸಂಸ್ಥೆಯ ಅಡಿಯಲ್ಲಿ ಪ್ರಾಥಮಿಕ ಶಾಲೆ, ಪ್ರೌಢ ಶಾಲೆಗಳು, ಪದವಿಪೂರ್ವ ಕಾಲೇಜು, ಹಾಸ್ಟೆಲ್ ಪ್ಯಾರಾ ಮೆಡಿಕಲ್ ಕಾಲೇಜು ನಡೆಯುತ್ತಿದ್ದು, ಇನ್ನು ಹೆಚ್ಚಿನ ಅಭಿವೃದ್ಧಿಗಾಗಿ ಹೊಸದಾಗಿ 100 ಜನ ಸಾಮಾನ್ಯ ಸದಸ್ಯರನ್ನು ಆಯ್ಕೆ ಮಾಡಲು ಆಡಳಿತ ಮಂಡಳಿ ತೀರ್ಮಾನಿಸಿದೆ.

ಸಾಮಾನ್ಯ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸುವವರು ದಾವಣಗೆರೆ ಜಿಲ್ಲೆ ವ್ಯಾಪ್ತಿಗೆ ಸೇರಿದವರಾಗಿರಬೇಕು. ಒಂದು ತಾಲ್ಲೂಕಿನ 10 ಜನ ಸದಸ್ಯರಂತೆ (ಹರಿಹರ, ಹೊನ್ನಾಳಿ, ಚನ್ನಗಿರಿ, ಮಾಯಕೊಂಡ, ಜಗಳೂರು) ಉಳಿದ ಸದಸ್ಯತ್ವ ದಾವಣಗೆರೆ ದಕ್ಷಿಣ ಹಾಗೂ ದಾವಣಗೆರೆ ಉತ್ತರಕ್ಕೆ ಕೊಡಲಾಗುವುದು ಎಂದು ಅಧ್ಯಕ್ಷ ಎಂ. ಹನುಮಂತಪ್ಪ ಮತ್ತು ಕಾರ್ಯದರ್ಶಿ ಬಿ.ಹೆಚ್. ವೀರಭದ್ರಪ್ಪ ತಿಳಿಸಿದ್ದಾರೆ.

# ಹೊಸ ಆವಿಷ್ಕಾರಗಳನ್ನು ಬಿತ್ತಲು ಎಳೆಯ ವಯಸ್ಸು ಸೂಕ್ತ



ಹೊನ್ನಾಳಿ : ವಿಜ್ಞಾನ ಜಾತ್ರೆ ಕಾರ್ಯಕ್ರಮದಲ್ಲಿ ಸಿ.ವಿ ರಾಮನ್ ವಿಜ್ಞಾನ ಸಂಘದ ಅಧ್ಯಕ್ಷರಾದ ಡಾ. ಶಕುಂತಲಾ ರಾಜ್ ಕುಮಾರ್

ಹೊನ್ನಾಳಿ,ಮಾ. 1 - ಹೊಸ ಆವಿಷ್ಕಾರಗಳನ್ನು ನಾವು ಮಕ್ಕಳ ಎಳೆಯ ವಯಸ್ಸಿನಲ್ಲಿಯೇ ಕಾಣಲು ಸಾಧ್ಯ, ಇದನ್ನು ನಾವು ಕಾಣ ಬೇಕಾದರೆ ಮಕ್ಕಳಲ್ಲಿ ಹೊಸ ಆಲೋಚನೆಗಳನ್ನು ಬಿತ್ತಬೇಕು ಎಂದು ಸಿ.ವಿ ರಾಮನ್ ವಿಜ್ಞಾನ ಸಂಘದ ಅಧ್ಯಕ್ಷೆ ಡಾ. ಶಕುಂತಲಾ ರಾಜ್ ಕುಮಾರ್ ಹೇಳಿದರು.

ಪಟ್ಟಣದ ಭಾರತೀಯ ವಿದ್ಯಾ ಸಂಸ್ಥೆಯಲ್ಲಿ ಆಯೋಜಿಸಿದ್ದ ಭಾವಿಸಂ ವಿಜ್ಞಾನ ಜಾತ್ರೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ವಿದ್ಯಾರ್ಥಿಗಳಲ್ಲಿ ಪ್ರಶ್ನೆ ಮಾಡುವ, ಆಲೋಚನ ಶಕ್ತಿಯನ್ನು ಆಧುನಿಕತೆ ಮರೆ ಮಾಚುತ್ತಿದೆ ಎಂಬ ಭಾವ ಕಾಡುತ್ತಿದೆ. ಅದನ್ನು ಹೋಗಲಾಡಿಸಲು ಇಂತಹ ಕಾರ್ಯಕ್ರಮಗಳು ಅಗತ್ಯ. ಸಣ್ಣದಾಗಿಯೇ ಮಾಡಿದ ಕಾರ್ಯ ಮುಂದೆ ದೊಡ್ಡದಾಗುತ್ತದೆ. ಅವರ ಕೊನೆಯ ವರೆಗೂ ನೆನಪಿನಲ್ಲಿ ಇಟ್ಟುಕೊಳ್ಳುವಂತೆ, ಮೆಲುಕು ಹಾಕುವಂತೆ ಕಾರ್ಯಕ್ರಮ ಇರಬೇಕು ಎಂದರು.

ಸಂಸ್ಥೆಯ ಕಾರ್ಯದರ್ಶಿ ಡಾ. ಎಚ್.ಪಿ ರಾಜ್ ಕುಮಾರ್ ಮಾತನಾಡಿ, ಶಿಕ್ಷಣ ಹೊರೆಯಾಗಬಾರದು. ಇಂದು ಮಕ್ಕಳು ತಮ್ಮ ಕೈಯಿಂದಲೇ ಹಲವು ಮಾದರಿಗಳನ್ನು ಮಾಡಿದ್ದಾರೆ. ಅದು ಅವರಲ್ಲಿ ಆತ್ಮವಿಶ್ವಾಸವನ್ನು ವೃದ್ಧಿಸುತ್ತದೆ ಎಂದರು.

ಎಲ್‌ಕೆಜಿ ವಿದ್ಯಾರ್ಥಿಗಳು ತರಕಾರಿ ವೇಷಭೂಷಣದೊಂದಿಗೆ ತರಕಾರಿ ಲೋಕ ಸೃಷ್ಟಿಸಿದ್ದರು. ಯುಕೆಜಿ ವಿದ್ಯಾರ್ಥಿಗಳು ವಿಜ್ಞಾನ ಸಂತೆಯ ಮೂಲಕ ಗಮನ ಸೆಳೆದರು. ಸಾರಿಗೆ ನೀ ಯಾರಿಗೇ? , ಹೂವುಗಳ ಲೋಕ, ಹಣ್ಣುಗಳ ಲೋಕ, ಕಾಳು, ಪಕ್ಷಿ, ಪ್ರಾಣಿಗಳ ಪರಿಚಯದೊಂದಿಗೆ 5, 6 ಮತ್ತು 7 ನೇ ತರಗತಿ ವಿದ್ಯಾರ್ಥಿಗಳು ತಮ್ಮ ಪಠ್ಯದಲ್ಲಿನ ಚಟುವಟಿಕೆಗಳನ್ನು ಮಾಡುವ ಮೂಲಕ ಗಮನ ಸೆಳೆದರು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಎ. ಆನಂದ್ ಕುಮಾರ್, ಸಹಕಾರ್ಯದರ್ಶಿ ಕೆ. ಗಣೇಶ್, ಖಜಾಂಚಿ ಕೆ. ಸೋಮಶೇಖರಪ್ಪ, ನಿರ್ದೇಶಕರಾದ ರೂಪ ಕರಿಸಿದ್ದಪ್ಪ, ಹಾಲೇಶ್ ಕುಂಕೋದ್, ಎಚ್.ಎಂ ಅರುಣ್ ಕುಮಾರ್, ಸುರೇಶ್ ಶೇಟ್, ಪ್ರಕಾಶ್ ಹೆಬ್ಬಾರ್, ಕೊಟ್ರೇಶ್ ಉತ್ತಂಗಿ, ಶಿಕ್ಷಕರಾದ ತಿಮ್ಮೇಶ್ ಆರ್, ಗಿರೀಶ್ ಎನ್.ಎಂ, ರುಕ್ಮಿಣಿ, ಶಶಿಕಲಾ, ನಾಗಮ್ಮ ಎಸ್, ಶಾಯಿಸ್ತ ಬಾನು, ಮಂಜಪ್ಪ, ಅಶೋಕ್ ಎಚ್. ಇದ್ದರು.

# ರಾಮಲಿಂಗೇಶ್ವರ ಮಹಾಸ್ವಾಮಿಗಳ ಮುಳ್ಳುಗದ್ದಿಗೆ, ಅಡ್ಡ ಪಲ್ಲಕ್ಕಿ ಉತ್ಸವ

ಚನ್ನಗಿರಿ, ಮಾ. 1- ತಾಲ್ಲೂಕಿನ ತ್ಯಾವಣಿಗೆ ಸಮೀಪದ ಹರನಹಳ್ಳಿ - ಕೆಂಗಾಪುರ ಶ್ರೀ ರಾಮಲಿಂಗೇಶ್ವರ ಮಠದಲ್ಲಿ ಇದೇ ದಿನಾಂಕ 5 ರಿಂದ 10 ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ.

ದಿನಾಂಕ 5 ರಂದು ಮಂಗಳವಾರ ಬೆಳಿಗ್ಗೆ 10 ಗಂಟೆಗೆ ದಾಸೋಹದ ಅಕ್ಕಿ ರಾಶಿ ಪೂಜೆ, ರಾತ್ರಿ 10 ಕ್ಕೆ ಡೊಳ್ಳು ಕುಣಿತ, ಕೀಲು ಕುದುರೆ ಕುಣಿತ, ಭಜನೆ, ಕೋಲು ಮೇಳ, ಸಕಲ ಭಕ್ತಾದಿಗಳೊಂದಿಗೆ ವಿಜೃಂಭಣೆಯಿಂದ ಶ್ರೀ ರಾಮಲಿಂಗೇಶ್ವರ ಮಹಾಸ್ವಾಮಿಯ ಒಳಮಠದಿಂದ ಹೊರ ಮಠಕ್ಕೆ ಉತ್ಸವ ಹೊರಡುವುದು ಹಾಗೂ ಕುಂಭಾಭಿಷೇಕ ನಡೆಯಲಿದೆ .

ದಿನಾಂಕ 8 ರಂದು ಶುಕ್ರವಾರ ಬೆಳಗ್ಗೆ 8 ಗಂಟೆಗೆ ಬ್ರಹ್ಮಮಾಲೆ ಗುರು ದೀಕ್ಷೆ, ಸಂಜೆ 5 ಗಂಟೆಗೆ ನಾಗದುಗ್ಗಳ ಕಾರ್ಯಕ್ರಮ, ಅಥಣಿ ತಾಲ್ಲೂಕಿನ ಶ್ರೀ ರಾಮಲಿಂಗೇಶ್ವರ ಕಲಾ ತಂಡದಿಂದ ಸಂಗೀತ ಕಾರ್ಯಕ್ರಮ ಹಾಗೂ ಶ್ರೀ ರಾಮಲಿಂಗೇಶ್ವರ ವಿದ್ಯಾ ಸಂಸ್ಥೆಯ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ದಿನಾಂಕ 9 ರ ಶನಿವಾರ ಬೆಳಿಗ್ಗೆ 6 ಗಂಟೆಗೆ ಶ್ರೀ ಸಮರ್ಥ ಸದ್ಗುರು ಶ್ರೀ ರಾಮಲಿಂಗೇಶ್ವರ ಮಹಾಸ್ವಾಮಿಗಳ 48 ನೇ ವರ್ಷದ ಮುಳ್ಳು ಗದ್ದಿಗೆ ಉತ್ಸವ, ಉಚಿತ ಸಾಮೂಹಿಕ ವಿವಾಹ, ಜವಳ, ಸಂಜೆ 7 ಗಂಟೆಗೆ ಶ್ರೀಗಳ ಅಡ್ಡ ಪಲ್ಲಕ್ಕಿ ಉತ್ಸವ ನೆರವೇರಲಿವೆ. ಅಂದಿನ ಕಾರ್ಯಕ್ರಮವನ್ನು ಮಾಜಿ ಲೋಕಸಭಾ ಸದಸ್ಯ ವಿ ಎಸ್ ಉಗ್ರಪ್ಪ ಉದ್ಘಾಟಿಸುವರು.

ದಿನಾಂಕ 10 ರ ಭಾನುವಾರ ಬೆಳಿಗ್ಗೆ 8 ಗಂಟೆಗೆ ಶ್ರೀಗಳ ಆಶೀರ್ವಚನ, 9 ಗಂಟೆಗೆ ಅಮಾವಾಸ್ಯೆ ಪ್ರಯುಕ್ತ ಅಗ್ನಿಹೋಮ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 9606297544 ಅಥವಾ 9845409510.

## ಶಾಸಕ ಬಸವಂತಪ್ಪ ಅವರಿಂದ ಕೆ. ಶಿವರಾಂ ಅವರಿಗೆ ಅಂತಿಮ ನಮನ



ದಾವಣಗೆರೆ, ಮಾ. 1- ನಿನ್ನೆ ನಿಧನರಾದ ಹಿರಿಯ ಐಎಎಸ್ ಅಧಿಕಾರಿ ಕೆ. ಶಿವರಾಮ್ ಅವರ ನಿಧನಕ್ಕೆ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಸಂತಾಪ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನ ಶಿವರಾಮ್ ಅವರ ನಿವಾಸಕ್ಕೆ ಇಂದು ಭೇಟಿ ನೀಡಿದ್ದ ಶಾಸಕ ಬಸವಂತಪ್ಪ, ಮೃತರ ಪಾರ್ಥಿವ ಶರೀರಕ್ಕೆ ಪುಷ್ಪಮಾಲೆ ಅರ್ಪಿಸಿ ಅಂತಿಮ ನಮನ ಸಲ್ಲಿಸಿದರು. ಶಿವರಾಮ್ ಅವರು ದಾವಣಗೆರೆ ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಸಲ್ಲಿಸಿದ ಸೇವೆಯನ್ನು ಬಸವಂತಪ್ಪ ಮೆಲಕು ಹಾಕಿದರು.

## ಮಹದೇವ್ ಆಪ್ ವಂಚನೆ : 580 ಕೋಟಿ ರೂ. ಷೇರುಗಳ ವಶ

ನವದೆಹಲಿ, ಮಾ. 1 - ಮಹದೇವ್ ಆಪ್ ವಂಚನೆಗೆ ಸಂಬಂಧಿಸಿದಂತೆ ದುಬೈನ ಹವಾಲಾ ಆಪರೇಟರ್‌ಗೆ ಸೇರಿದ 580 ಕೋಟಿ ರೂ. ಮೌಲ್ಯದ ಷೇರುಗಳು ಹಾಗೂ 3.64 ಕೋಟಿ ರೂ. ಮೊತ್ತದ ಅಮೂಲ್ಯ ವಸ್ತುಗಳನ್ನು ವಶಪಡಿಸಿಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ ತಿಳಿಸಿದೆ.

ಫೆಬ್ರವರಿ 28ರಂದು ಕೊಲ್ಕೊತಾ, ಗುರುಗ್ರಾಮ್, ದೆಹಲಿ ಇಂದೋರ್, ಮುಂಬೈ ಹಾಗೂ ರಾಯಪುರಗಳಲ್ಲಿ ದಾಳಿ ನಡೆಸಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಮಹದೇವ್ ಆನ್‌ಲೈನ್ ಬೆಟ್ಟಿಂಗ್ ಆಪ್ ಅವ್ಯವಹಾರದಲ್ಲಿ ಛತ್ತೀಸ್‌ಘಡದ ಉನ್ನತ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಭಾಗಿಯಾಗಿದ್ದಾರೆ ಎಂದು ಜಾರಿ ನಿರ್ದೇಶನಾಲಯ ಆರೋಪಿಸಿದೆ.

ಹವಾಲಾ ಆಪರೇಟರ್ ಹರಿ ಶಂಕರ್ ಟಿಬ್ರೆವಾಲ್‌ಗೆ ಸೇರಿದ ಷೇರು ಹಾಗೂ ಆಸ್ತಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಈತ ಕೊಲ್ಕೊತಾ ಮೂಲದವನಾಗಿದ್ದರೂ, ಪ್ರಸಕ್ತ ದುಬೈನಲ್ಲಿದ್ದಾನೆ ಎಂದು ಮೂಲಗಳು ತಿಳಿಸಿವೆ.

# ಮೌಲಾನಾ ಆಜಾದ್ ಶಿಕ್ಷಣ ಪ್ರತಿಷ್ಠಾನ ಮುಚ್ಚುವ ಕೇಂದ್ರದ ನಿರ್ಧಾರ ಖಂಡನೀಯ : ಎಐಡಿಎಸ್‌ಒ

ದಾವಣಗೆರೆ, ಮಾ.1- ಅಲ್ಪಸಂಖ್ಯಾತ ಸಮುದಾಯದ ಉನ್ನತಿಗಾಗಿ ಮತ್ತು ಅವರಲ್ಲಿ ಶಿಕ್ಷಣದ ವ್ಯಾಪ್ತಿಯನ್ನು ಸುಧಾರಿಸುವ ಮಹತ್ತರವಾದ ಆಶಯದೊಂದಿಗೆ ಅಸ್ತಿತ್ವಕ್ಕೆ ಬಂದ ಮೌಲಾನಾ ಆಜಾದ್ ಶಿಕ್ಷಣ ಪ್ರತಿಷ್ಠಾನವನ್ನು ಮುಚ್ಚುವ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದ ನಿರ್ಧಾರ ಖಂಡನೀಯವಾಗಿದೆ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಹೇಳಿಕೆ ನೀಡಿದ್ದಾರೆ.

ಹಲವು ವರ್ಷಗಳಿಂದ ಲಕ್ಷಾಂತರ ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆದಿದ್ದಾರೆ. ಆದರೆ ಈ ಯೋಜನೆಗೆ 2022-23 ರಲ್ಲಿ ಕೇವಲ ಒಂದು ಲಕ್ಷ ರೂ.ಗಳನ್ನು ಮಾತ್ರ ನಿಗದಿಪಡಿಸಲಾಗಿದೆ. ತುಷ್ಟೀಕರಣ ರಾಜಕೀಯದ ಬಗ್ಗೆ ಕಾಂಗ್ರೆಸ್ ಅನ್ನು ಟೀಕಿಸುವ ಮತ್ತು ಅಲ್ಪಸಂಖ್ಯಾತರನ್ನು ಉನ್ನತ ಶಿಕ್ಷಣದಿಂದ ದೂರವಿಟ್ಟಿದ್ದ ಕ್ಕಾಗಿ ಹಿಂದಿನ ಆಡಳಿತವನ್ನು ದೂಷಿಸುವ ಅದೇ ಸರ್ಕಾರವು ದೊಡ್ಡ ಹೊಡೆತವನ್ನು ನೀಡಿದೆ.

ಕಳೆದ ಕೆಲವು ವರ್ಷಗಳಿಂದ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಹಲವಾರು ವಿದ್ಯಾರ್ಥಿ ವೇತನಗಳು ಮತ್ತು ಫೆಲೋಶಿಪ್‌ಗಳು ದಿಗ್ಭ್ರಮೆಗೊಳಿಸುವ ದರದಲ್ಲಿ ಹೇಗೆ ಕಡಿಮೆಯಾಗುತ್ತಿವೆ ಎಂಬುದನ್ನು ನಾವು ನೋಡಿದ್ದೇವೆ. ಈ ಸಮುದಾಯಗಳು ಉನ್ನತ ಕಲಿಕೆ ಮತ್ತು ಚಿಂತನೆಯ ವ್ಯಾಪ್ತಿಯಿಂದ ಹೊರಗಿವೆ. ಅವರ ಉನ್ನತಿಗಾಗಿ, ಇಂತಹ ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೂಲಕ ಕಲಿಕೆಯನ್ನು ಪ್ರೋತ್ಸಾಹಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಅವರ ಮುಂದಿರುವ ಆಡಳಿತ ಪಕ್ಷದ ಅಜೆಂಡಾದಿಂದಾಗಿ ಇಡೀ ಸಮುದಾಯವೇ ಕತ್ತಲಲ್ಲಿ ಕಣ್ಣು ಹಾಯಿಸುತ್ತಿರುವುದು ನೋವಿನ ಸಂಗತಿ. ಸರ್ಕಾರ ಆದೇಶವನ್ನು ಹಿಂಪಡೆಯಬೇಕು ಮತ್ತು ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಮರು ಸ್ಥಾಪಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.


**DAVID Coaching Centre**
Coaching classes for SSLC students commences
**from 11th March 2024**
CBSE and State Syllabus, Subjects : Maths & Science
***Highlights :*** • 33 years of teaching Experience • Digital classes • Individual attention • Regular Class test • Printed Notes • Timely completion syllabus
**Contact : Mr. David** : #2491, MCC A Block, 9th Cross, Near Hair trend Spa Davanagere. **Mob : 94482 33494**

**ACCOMMODATION AVAILABLE FOR LEASE/RENT**
SHOPS-2&5 (BOTH-234 SFT) are available for Rent in Binny Company Road, (UCO Bank building)
**Interested Parties may Contact At :**
**Sree Kodandarama Devaru Temple Association**
# 56/1,2, Hanumanthappa Buildings
Poona-Bangalore Road, Davangere-2.
**Ph. : 94498 28834**

**ಬೇಕಾಗಿದ್ದಾರೆ**
**ಎಸ್.ಎಲ್.ವಿ ಎಂಟರ್‌ಪ್ರೈಸಸ್**
- ಕಂಪ್ಯೂಟರ್ ಡಿಸೈನಿಂಗ್
- ಆಪರೇಟರ್ ಹಾಗೂ
- ಆಫೀಸ್ ಬಾಯ್ ಬೇಕಾಗಿದ್ದಾರೆ.



ಎಸ್.ಎಸ್. ಲೇಔಟ್ 'ಎ' ಬ್ಲಾಕ್, 7ನೇ ಕ್ರಾಸ್, ಶಾರದಾಂಬ ದೇವಸ್ಥಾನದ ಹತ್ತಿರ.
**ಮೊ : 96635 63837, 96860 34662**


## ಮಾನ್ಯ ಭೂ ದಾಖಲೆಗಳ ಉಪನಿರ್ದೇಶಕರ ನ್ಯಾಯಾಲಯ, ದಾವಣಗೆರೆ.

**ಭೂ.ಸ.ನಿ. ಆರ್ ಸಂಖ್ಯೆ 620/2023-24**

**ಅಪೀಲುದಾರರು :** 1) ಉಷಾರಾಣಿ ಕೋಂ ಲೇಟ್ ಓಬಳೇಶಪ್ಪ ವಯಸ್ಕರು.

**ವಿರುದ್ಧ**

**ಎದುರುದಾರರು:** 1) ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ದಾವಣಗೆರೆ ತಾಲ್ಲೂಕು ಮತ್ತು ಇತರರು.

ಎದುರುದಾರರ ನಂ. 4) ವಿ. ಮತ್ಯುಂಜಯಪ್ಪ ಬಿನ್ ಪೂರಯ್ಯ, ವಯಸ್ಕರು, ವಾಸ : ದಾವಣಗೆರೆ

**ಸಿ.ಪಿ ಸಿ ಆದೇಶ 5 ನಿಯಮ 20ರ ಅಡಿಯಲ್ಲಿ ನೀಡಲಾದ ಪ್ರಕಟಣಾ ನೋಟಿಸ್**

ಮೇಲ್ಕಂಡ ಅಪೀಲುದಾರರು ಘನ ನ್ಯಾಯಾಲಯದಲ್ಲಿ ಪೋಡುಗಳನ್ನು ರದ್ದು ಪಡಿಸಿ ಹೊಸ ಪೋಡುಗಳನ್ನು ಮಾಡಿಕೊಡುವಂತೆ ಸದರಿ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ 06ನೇ ಎದುರುದಾರರು ನಿಮ್ಮ ತಕರಾರು ಏನಾದರೂ ಇದ್ದಲ್ಲಿ ಕಾರಣ, ಹಾಜರಾತಿಗಾಗಿ ದಿನಾಂಕ: 05.03.2024ರಂದು ಮಧ್ಯಾಹ್ನ 3:00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು ತಕರಾರು ಇದ್ದಲ್ಲಿ ಸಲ್ಲಿಸಬಹುದು. ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕ ಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ ಅಣಜಿ ಗ್ರಾಮದ ರಿ.ಸ. ನಂ 37/5, 1ಎ, 1ಬಿ ಮತ್ತು 6 ರಲ್ಲಿನ ಪೋಡುಗಳನ್ನು ರದ್ದು ಪಡಿಸುವ ಕುರಿತಂತೆ

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ: 27.02.2024 ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
**ಶಿರಸ್ತೇದಾರರು / ಸೂಪರಿಂಟೆಂಡೆಂಟ್**
ಡಿ.ಡಿ. ಎಲ್.ಆರ್. ನ್ಯಾಯಾಲಯ




## ಗಮನ ಸೆಳೆದ ಕಾಲಶಾಸ್ತ್ರ, ತ್ರಿಶೂಲ ಪವಾಡ

ಮಲೇಬೆನ್ನೂರು, ಮಾ.1- ದೇವರಬೆಳಕೆರೆ ಗ್ರಾಮದಲ್ಲಿ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿಯ ರಥೋತ್ಸವದ ಅಂಗವಾಗಿ ಶುಕ್ರವಾರ ಸಂಜೆ ಅಪಾರ ಭಕ್ತರ ಸಮ್ಮುಖದಲ್ಲಿ ನಡೆದ ಕಾಲಶಾಸ್ತ್ರ, ತ್ರಿಶೂಲ ಮತ್ತು ಸರಪಳಿ ಪವಾಡಗಳು ಗಮನ ಸೆಳೆದವು.

ಇದಕ್ಕೂ ಮುನ್ನ ದೇವರ ಬಾವುಟ, ಹೂವಿನಹಾರ ಹಾಗೂ ಇತ್ಯಾದಿ ವಸ್ತುಗಳ ಹರಾಜು ಪ್ರಕ್ರಿಯೆ ನಡೆಯಿತು. ರಾತ್ರಿ ಓಕುಳಿಯೊಂದಿಗೆ ಜಾತ್ರೆಗೆ ತೆರೆ ಎಳೆಯಲಾಯಿತು. ದೇವಸ್ಥಾನದಲ್ಲಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

# ಉಚಿತ ಆಕ್ಸಿಜನ್ ಕೊಡುವ ಗಿಡ ಮರಗಳನ್ನು ಬೆಳೆಸಬೇಕು

ದಾವಣಗೆರೆ, ಮಾ.1- ಪರಿಸರ ಅಂದಾಕ್ಷಣ ನೆನಪಾಗುವುದು ಬರೀ ಗುಡ್ಡ- ಬೆಟ್ಟ, ಅಲ್ಲಿರುವ ಗಿಡ- ಮರಗಳು ಅಷ್ಟೇ ಅಲ್ಲ ನಮ್ಮ ಸುತ್ತಲೂ ಇರುವ ವಿವಿಧ ಕ್ಷೇತ್ರಗಳ ವಾತಾವರಣವೂ ಚೆನ್ನಾಗಿರಬೇಕು ಎಂದು ಯುವ ವಿಜ್ಞಾನಿ, ದಾವಣಗೆರೆ ವಿಶ್ವವಿದ್ಯಾಲಯದ ಪರಿಸರ ಮತ್ತು ವಿಜ್ಞಾನ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಎಸ್. ಜೆ. ವೀರೇಶ್ ನುಡಿದರು.

ನಗರದ ಹಾಲಕೆರೆ ಶ್ರೀ ಅನ್ನದಾನೇಶ್ವರ ಮಠದಲ್ಲಿ ನಿನ್ನೆ ಏರ್ಪಡಿಸಿದ್ದ 266ನೇ ಶಿವಾನುಭವ ಸಂಪದದಲ್ಲಿ ಉಪನ್ಯಾಸ ನೀಡಿದ ಅವರು, ಶಿಕ್ಷಣ ಕ್ಷೇತ್ರ, ಮಠದ ಪರಿಸರ ಮನುಷ್ಯನನ್ನು ಮತ್ತಷ್ಟು ಎತ್ತರಕ್ಕೆ ಬೆಳೆಸುತ್ತದೆ ಎಂದರು.

ಪೊಲೀಸ್ ಠಾಣೆ, ಕೋರ್ಟ್, ಆಸ್ಪತ್ರೆಗಳೂ ಸಹ ಪರಿಸರದ ವ್ಯಾಪ್ತಿಯಲ್ಲಿ ಬರುತ್ತವೆ. ಬರೀ ಪಾಠ ಓದಿದರೆ ಸಾಲದು, ಅದರ ತಿರುಳು ತಿಳಿದು ಜೀವನದಲ್ಲಿ ಅಳವಡಿಸಿಕೊಂಡು ಕೃತಿಯಲ್ಲಿ ಜಾರಿಗೆ ತಂದಾಗ ಮಾತ್ರ ಮನುಷ್ಯರ ಜೀವನ ಸಾರ್ಥಕವಾಗುತ್ತದೆ. ಪರಿಸರಕ್ಕೂ ಬಸವಣ್ಣನವರ ವಚನಗಳಿಗೂ ಸಾಮ್ಯತೆ ಇದೆ ಎಂದು ನುಡಿದು, ಪ್ರಕೃತಿಯ ಸೂಕ್ಷ್ಮಾಣು ಜೀವಿಗಳ ಬಗ್ಗೆ ಸದಾ ಜಾಗೃತರಾಗಿರಬೇಕು ಎಂದರು.



ಹಣದಿಂದ ವಸ್ತುಗಳನ್ನು ಖರೀದಿಸಬಹುದು. ಆದರೆ ಪರಿಸರದಲ್ಲಿ ಗಿಡ ಮರಗಳು ಕೊಡುವ ಆಕ್ಸಿಜನ್ ನಿಂದ ಸಮಾಜ ಆರೋಗ್ಯವಾಗಿರುತ್ತದೆ, ಪ್ಲಾಸ್ಟಿಕ್ ನಂತಹ ವಿಷದ ವಸ್ತುಗಳನ್ನು ಬೆಂಕಿಯಲ್ಲಿ ಸುಡಬೇಡಿ. ಅದರಿಂದ ಕ್ಯಾನ್ಸರ್ ರೋಗ ಉಲ್ಬಣವಾಗುತ್ತದೆ, ಆಗ ಆಸ್ಪತ್ರೆಗೆ ಹೋಗಿ ಆಕ್ಸಿಜನ್ ಖರೀದಿಸುತ್ತೇವೆ. ಇದರ ಅವಶ್ಯಕತೆ ಇದೆಯೇ ? ಎಂದು ಪ್ರಶ್ನಿಸಿ ನಮ್ಮ ಆರೋಗ್ಯ ನಮ್ಮ ಕೈಯ್ಯಲ್ಲಿರಬೇಕು ಎಂದರು.

ಸುಸ್ಥಿರ ಪರಿಸರ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡಬೇಕು. ಸೂರ್ಯನ ಕಿರಣಗಳು ಕೇವಲ 2 ರಷ್ಟು ಮಾತ್ರ ಭೂಮಿಗೆ ಬರುತ್ತವೆ. ಇದು ಹೆಚ್ಚಾದರೆ, ಸಾವು- ನೋವುಗಳು ಹೆಚ್ಚಾಗುತ್ತವೆ. ಸೂರ್ಯನ ಸುತ್ತಲೂ ಇರುವ ಓಝೋನ್ ಪದರ ಕೆಲಸ ಮಾಡದಿದ್ದರೆ, ಲೋಕ ಅಲ್ಲೋಲ ಕಲ್ಲೋಲವಾಗುತ್ತದೆ, ಆದ್ದರಿಂದ ಮನುಷ್ಯರಾದ ನಾವು ವಾಯುಮಾಲಿನ್ಯವನ್ನು ತಡೆಯಬೇಕು. ಹೆಚ್ಚು ಗಿಡಗಳನ್ನು ನೆಡುವುದರ ಮೂಲಕ ಪರಿಸರದ ಬಗ್ಗೆ ಸದಾ ಜಾಗೃತರಾಗಿರಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಹಾಲಕೆರೆ ಶ್ರೀ ಅನ್ನದಾನೇಶ್ವರ ಸಂಸ್ಥಾನ ಮಠದ ಜಗದ್ಗುರು ಶ್ರೀ ಮುಪ್ಪಿನ ಬಸವಲಿಂಗ ಮಹಾ ಸ್ವಾಮೀಜಿ ಆಶೀರ್ವಚನ ನೀಡುತ್ತಾ, ಅನುರೇಣು ತೃಣಕಾಷ್ಟ, ಎಂಬಂತೆ ಎಲ್ಲದರಲ್ಲಿಯೂ ಶಿವನ ಅನುಭವ ಹೊಂದಬೇಕು. ಪರಿಸರ ಮತ್ತು ವಿಜ್ಞಾನದ ತಿಳಿವಳಿಕೆ ಅರಿತಿರಬೇಕು. ಒತ್ತಡದ ಜೀವನ ಶೈಲಿಯಲ್ಲಿಯೂ ಮನುಷ್ಯ ಪರಿಸರಕ್ಕೆ ಹೆಚ್ಚು ಕಾಳಜಿ ತೋರಿಸಬೇಕೆಂದರು.

ಲಿಂ. ಶ್ರೀಮತಿ ಗೌರಮ್ಮ ಲಿಂ.ಕೆ. ತಿಪ್ಪಣ್ಣನವರ ಸ್ಮರಣಾರ್ಥ ಅವರ ಪುತ್ರ ಕೆ.ಟಿ. ಮಹಾಲಿಂಗಪ್ಪ ಮತ್ತು ಶ್ರೀಮತಿ ಶೈಲ ಅವರು ಭಕ್ತಿ ಸೇವೆಯನ್ನು ವಹಿಸಿಕೊಂಡಿದ್ದರು.

ಟಿ.ಹೆಚ್.ಎಂ. ಶಿವಕುಮಾರ ಸ್ವಾಮಿ ಪ್ರಾರ್ಥಿಸಿದರು. ಹಿರಿಯ ಪತ್ರಕರ್ತ ವೀರಪ್ಪ ಎಂ. ಬಾವಿ ಸ್ವಾಗತಿಸಿದರು. ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆಯ ಸಹ ಶಿಕ್ಷಕಿ ವಿ.ಬಿ. ತನುಜ ಕಾರ್ಯಕ್ರಮ ನಿರೂಪಿಸಿದರು. ಸುಜಾತ ವಂದಿಸಿದರು. ಶ್ರೀ ವಿಶ್ವೇಶ್ವರ ದೇವರು, ಕಾರ್ಯದರ್ಶಿ ಎನ್. ಅಡಿವೆಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಹರಿಹರದಲ್ಲಿ ಕೊಟ್ಟೂರು ಮಹಾರಥೋತ್ಸವಕ್ಕೆ ಪಾದಯಾತ್ರೆ



ಹರಿಹರ, ಫೆ.1- ಸೋಮವಾರ ನಡೆಯುವ ಕೊಟ್ಟೂರು ಶ್ರೀ ಗುರುಬಸವೇಶ್ವರ ಸ್ವಾಮಿ ಮಹಾ ರಥೋತ್ಸವದಲ್ಲಿ ಪಾಲ್ಗೊಳ್ಳಲು ನಗರದ ಹೊರವಲಯದ ಕೋಡಿಯಾಲ ಹೊಸಪೇಟೆ ಗ್ರಾಮದ ಭಕ್ತರು ಪಾದಯಾತ್ರೆ ಮೂಲಕ ಇಂದು ಸಂಜೆ ತೆರಳಿದರು.

ಈ ಸಂದರ್ಭದಲ್ಲಿ ಪೂಜಾರ್ ಮಂಜುನಾಥ್ ಸ್ವಾಮಿ, ಬಸವರಾಜ್ ಬಣಕಾರ್, ಪ್ರವೀಣ್ ಕರಡೆಪ್ಪನವರ್, ಸಂದೀಪ್ ಪೂಜಾರ್, ಗುರು, ರುದ್ರೇಶ್ ಬಾತಿ, ಹುಚ್ಚಪ್ಪ, ಗಿರೀಶ್ ಇತರರು ಹಾಜರಿದ್ದರು.

## ತ.ನಾಡಿನಿಂದ ದೆಹಲಿವರೆಗೆ ಬೈಕ್‌ನಲ್ಲಿ ಮೋದಿ ಪರ ಪ್ರಚಾರ : ಬೀಳ್ಕೊಡುಗೆ



ಮಲೇಬೆನ್ನೂರು, ಮಾ.1- ಪ್ರಧಾನಿ ನರೇಂದ್ರ ಮೋದಿ ಅವರ ಪರವಾಗಿ ಪ್ರಚಾರ ಮಾಡುತ್ತಾ ಬೈಕ್‌ನಲ್ಲಿ ತಮಿಳುನಾಡಿನ ಮಧುರೆಯಿಂದ ದೆಹಲಿವರೆಗೆ ಜಾಗೃತಿ ಜಾಥಾ ಕೈಗೊಂಡಿರುವ ರಾಜಲಕ್ಷ್ಮಿ ಮತ್ತು ಅವರ ತಂಡ ಇಂದು ಸಂಜೆ ಹೊನ್ನಾಳಿಯಿಂದ ಮಲೇಬೆನ್ನೂರಿಗೆ ಆಗಮಿಸಿದಾಗ ಬಿಜೆಪಿ ಕಾರ್ಯಕರ್ತರು ಸ್ವಾಗತಿಸಿ, ನಂತರ ಹರಿಹರಕ್ಕೆ ಬೀಳ್ಕೊಟ್ಟರು.

ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಪಿ.ಆರ್.ರಾಜು, ಎ.ಕೆ. ಲೋಕೇಶ್, ಕಜ್ಜರಿ ಹರೀಶ್ ಬಟ್ಟೆ ಅಂಗಡಿ ವಿಶ್ವ, ಚಾಮುಂಡಿ, ಜಿಗಳಿ ಹನುಮಗೌಡ ಮತ್ತಿತರರು ಈ ವೇಳೆ ಹಾಜರಿದ್ದರು.

# ಕೆಫೆಯಲ್ಲಿ ಸ್ಫೋಟ : 10 ಜನರಿಗೆ ಗಾಯ

**(1ನೇ ಪುಟದಿಂದ)** ಬಾಂಬ್ ಸ್ಫೋಟ ಸಂಭವಿಸಿದೆ. ಘಟನೆಯಲ್ಲಿ ಹತ್ತು ಜನ ಗಾಯಗೊಂಡಿದ್ದಾರೆ. ಯಾರಿಗೂ ಗಂಭೀರ ಗಾಯಗಳಾಗಿಲ್ಲ ಎಂದು ತಿಳಿಸಿದ್ದಾರೆ.

ವಿಧಿ ವಿಜ್ಞಾನ ತಂಡಗಳು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿವೆ. ಈ ಸ್ಫೋಟದ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆ ಮಾಡುತ್ತೇವೆ ಎಂದು ತಿಳಿಸಿದ್ದಾರೆ.

ಸ್ಫೋಟಕ ಇದ್ದ ಚೀಲವನ್ನು ಹೊರಗಿನಿಂದ ತಂದಿಡಲಾಗಿದೆ ಎಂದು ರಾಮೇಶ್ವರಂ ಕೆಫೆಯ ಸಹ ಸ್ಥಾಪಕಿ ಹಾಗೂ ವ್ಯವಸ್ಥಾಪಕ ನಿರ್ದೇಶಕಿ ದಿವ್ಯಾ ರಾಘವೇಂದ್ರ ರಾವ್ ಹೇಳಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಯಡಿಯೂರಪ್ಪ, ರಾಜ್ಯ ಸರ್ಕಾರ ಈ ಬಗ್ಗೆ ವಿವರವಾದ ತನಿಖೆ ನಡೆಸಬೇಕು. ಘಟನೆಗೆ ಕಾರಣವಾದವರನ್ನು ಬಿಡಬಾರದು ಎಂದಿದ್ದಾರೆ.

ಅನಿಲ ಸೋರಿಕೆಯಿಂದ ಸ್ಫೋಟ ಸಂಭವಿಸಿದೆ ಎಂದು ಮೊದಲು ಶಂಕಿಸಲಾಗಿತ್ತು. ಆದರೆ, ಅನಿಲ ಸೋರಿಕೆಯ ಸಾಧ್ಯತೆಯನ್ನು ಅಗ್ನಿಶಾಮಕ ದಳ ತಳ್ಳಿ ಹಾಕಿತ್ತು. ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಅಕ್ರಮ ಚಟುವಟಿಕೆ (ತಡೆ) ಕಾಯ್ದೆ ಹಾಗೂ ಸ್ಫೋಟಕ ವಸ್ತುಗಳ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.



ಸ್ಫೋಟಗೊಂಡ ಸ್ಥಳ ಹಾಗೂ ಸ್ಥಳದಲ್ಲಿ ಕಂಡು ಬಂದ ನಟ್ಟು ಬೋಲ್ಟುಗಳು

ಈ ಬಗ್ಗೆ ಹೇಳಿಕೆ ನೀಡಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಇದು ಕಡಿಮೆ ತೀವ್ರತೆಯ ಸ್ಫೋಟವಾಗಿದೆ. ವ್ಯಕ್ತಿಯೋರ್ವ ಟೈಮರ್ ಅಳವಡಿಸಿ ಸ್ಫೋಟ ನಡೆಸಿದ್ದಾನೆ ಎಂದಿದ್ದಾರೆ.

ಪ್ರಕರಣದ ತನಿಖೆಗಾಗಿ ಏಳೆಂಟು ತಂಡಗಳನ್ನು ರಚಿಸಲಾಗಿದೆ. ಈ ಬಗ್ಗೆ ಯಾರೂ ಕಳವಳಗೊಳ್ಳಬೇಕಿಲ್ಲ. ತಪ್ಪಿತಸ್ಥನ ಪತ್ತೆ ಮಾಡಲಾಗುವುದು ಎಂದು ಶಿವಕುಮಾರ್ ಹೇಳಿದ್ದಾರೆ.

# ಆರಂಭದಲ್ಲೇ ಬೇಸಿಗೆ ಬಿರುಸು ಜೋರು

**(1ನೇ ಪುಟದಿಂದ)** ಗಿಂತ ಹೆಚ್ಚಾಗಿರಲಿದೆ ಎಂದು ಹವಾಮಾನ ಇಲಾಖೆಯ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮೊಹಾಪಾತ್ರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಆದರೆ, ಮಾರ್ಚ್ ತಿಂಗಳಲ್ಲಿ ಉತ್ತರ ಹಾಗೂ ಮಧ್ಯ ಭಾರತದಲ್ಲಿ ಬಿಸಿಗಾಳಿಯ ಪರಿಸ್ಥಿತಿ ಇರುವುದಿಲ್ಲ ಎಂದು ಮೊಹಾಪಾತ್ರ ಹೇಳಿದ್ದಾರೆ.

ಮಧ್ಯ ಪೆಸಿಫಿಕ್ ಸಮುದ್ರದಲ್ಲಿ ಬಿಸಿ ಹೆಚ್ಚಾಗಿರುವ ಪರಿಸ್ಥಿತಿಯನ್ನು ಎಲ್ ನೀನೋ ಎಂದು ಕರೆಯಲಾಗುತ್ತದೆ. ಎಲ್ ನೀನೋ ಸಾಮಾನ್ಯವಾಗಿ ಭಾರತದಲ್ಲಿ ಬೇಸಿಗೆ ಬೇಗೆ ಹೆಚ್ಚಿಸುತ್ತದೆ.

### ಬಿಸಿಲು: ದೇವನಗರಿ ಜನತೆಗೆ ದಿಗಿಲು

**(1ನೇ ಪುಟದಿಂದ)** ಕೊಡೆಗಳಿಗೆ, ಮರದ ನೆರಳಿಗೆ ಮೊರೆ ಹೋಗುತ್ತಿದ್ದಾರೆ. ಎಳನೀರು, ಕಬ್ಬಿನ ಹಾಲು, ಜ್ಯೂಸ್ ಮೊದಲಾದ ತಂಪು ಪಾನೀಯಗಳಿಗೆ ಬೇಡಿಕೆ ಹೆಚ್ಚಾಗಿದೆ.

ಇನ್ನು ದಾವಣಗೆರೆಯಲ್ಲಿ ಕುಡಿಯುವ ನೀರಿನ ತತ್ವಾರ ಆರಂಭವಾಗಿದೆ. ನಗರಕ್ಕೆ ನೀರು ಒದಗಿಸುವ ಕುಂದುವಾಡ ಹಾಗೂ ಟಿವಿ ಸ್ಟೇಷನ್ ಕೆರೆಗಳಲ್ಲಿರುವ ನೀರು ಏಪ್ರಿಲ್ ವರೆಗೆ ಲಭ್ಯವಾಗುತ್ತದೆ ಎಂದು ಅಧಿಕಾರಿಗಳು ಹೇಳುತ್ತಾರಾದರೂ, ಸ್ವತಃ ಮಹಾನಗರ ಪಾಲಿಕೆ ಸದಸ್ಯರಿಗೂ ಈ ಬಗ್ಗೆ ನಂಬಿಕೆ ಇಲ್ಲ.

ಕಳೆದ ಬಾರಿ ಇದೇ ರೀತಿ ಮಳೆ ಇಲ್ಲದೆ ಬರ ಆವರಿಸಿದ್ದಾಗ ನಗರದ ಬಡಾವಣೆ ಗಳಲ್ಲಿರುವ ಬೋರ್‌ಗಳು ಬತ್ತಿ ಹೋಗಿದ್ದವು. ಅದೇ ಪರಿಸ್ಥಿತಿ ಮರುಕಳಿಸಬಹುದು ಎಂಬ ಆತಂಕವೂ ಜನರಲ್ಲಿದೆ.

# ರಾಣೇಬೆನ್ನೂರು : ಬೆಳ್ಳುಳ್ಳಿ ಖರೀದಿದಾರರ ವಂಚನೆ ಖಂಡಿಸಿ ರೈತರಿಂದ ರಸ್ತೆ ತಡೆ

**ಖರೀದಿದಾರರ ಲೈಸನ್ಸ್ ರದ್ಧತಿಗೆ ಪಾಟೀಲ್ ಆಗ್ರಹ**

ರಾಣೇಬೆನ್ನೂರು, ಮಾ.1- ಬೆಳ್ಳುಳ್ಳಿ ಖರೀದಿದಾರರು ಅತಿಯಾದ ಆಸೆಗೆ ಬಿದ್ದು, ಕಳೆದ 45 ದಿನಗಳಿಂದ ಇಲ್ಲಿಗೆ ಬೆಳ್ಳುಳ್ಳಿ ಮಾರಾಟಕ್ಕೆ ಬರುವ ರೈತರನ್ನು ವಂಚಿಸುತ್ತಿದ್ದಾರೆ. ಖಾಸಗಿ ಸಾಮಿಲ್‌ನಲ್ಲಿಯೇ ಅನಧಿಕೃತ ಮಾರುಕಟ್ಟೆ ನಿರ್ಮಿಸಿಕೊಂಡು ಎಪಿಎಂಸಿಯ ಕೆಲವು ಅಧಿಕಾರಿಗಳೊಂದಿಗೆ ಒಳ ಒಪ್ಪಂದ ಮಾಡಿಕೊಂಡಿರುವ ಖರೀದಿದಾರರ ಪರವಾನಗಿ ರದ್ದು ಪಡಿಸಬೇಕೆಂದು ಮತ್ತು ಈ ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳನ್ನು ಈ ಕೂಡಲೇ ಸಸ್ಪೆಂಡ್ ಮಾಡಬೇಕೆಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ್ ಒತ್ತಾಯಿಸಿದರು.

ಹಲಗೇರಿ ಎಪಿಎಂಸಿ ಹತ್ತಿರ ಬೆಳ್ಳುಳ್ಳಿ ಖರೀದಿದಾರರಿಂದ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಿ ಹಮ್ಮಿಕೊಂಡಿದ್ದ ರಸ್ತೆ ತಡೆ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ಅವರು, ಇದೊಂದು ರೈತ ವಿರೋಧಿ ಚಟುವಟಿಕೆಯಾಗಿದ್ದು, ಈಗಿರುವ ಬೆಳ್ಳುಳ್ಳಿ ದರ ಹೀಗೆಯೇ ಇರುವುದಿಲ್ಲ. ನಾಲ್ಕೈದು ವರ್ಷಗಳಿಗೊಮ್ಮೆ ಈ ದರ ಸಿಕ್ಕರೆ ಅದನ್ನು ಕೂಡ ಸಹಿಸದ ಇಂತಹ ಮನಸ್ಥಿತಿಗಳಿಗೆ ಕಾನೂನಿನ ತಕ್ಕ ಪಾಠ ಕಲಿಸಬೇಕಾಗಿದೆ ಎಂದರು.

ಇನ್ನೊಬ್ಬ ರೈತ ಮುಖಂಡ ಬಸಣ್ಣ ಕಡೂರ ಮಾತನಾಡಿ, ಅಧಿಕಾರಿಗಳ ಒಳಸಂಚಿನಿಂದ ಇಂತಹ ಕೃತ್ಯಗಳು ನಡೆಯುತ್ತಿವೆ ಎಂದು ಆಪಾದಿಸಿದರು

ಹಲಗೇರಿ ಎಪಿಎಂಸಿ ದೊಡ್ಡ ಪ್ರಾಂಗಣವಾಗಿದ್ದು, ಮೊದಲು ಇಲ್ಲಿ ಸ್ವಚ್ಛತೆ ಕಾಪಾಡಿ, ಇಲ್ಲಿ ನಡೆಯುತ್ತಿರುವ ಅನೈತಿಕ ಚಟುವಟಿಕೆಗೆ ಕಡಿವಾಣ ಹಾಕಬೇಕೆಂದು ರೈತ ಮುಖಂಡ ಪ್ರಕಾಶ ಹರಿಯಾಳದವರ ಒತ್ತಾಯಿಸಿದರು.

ಗ್ರಾಮೀಣ ಸಿಪಿಐ ಶಿದ್ದೇಶ್, ಹಲಗೇರಿ ಠಾಣಾ ಪಿ.ಎಸ್.ಐ ಪರಶುರಾಮ ಲಮಾಣಿ ತಮ್ಮ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ದೌಡಾಯಿಸಿದ್ದರು. ಎಪಿಎಂಸಿ ಕಾರ್ಯದರ್ಶಿ ಶ್ರೀಮತಿ ಶೈಲಜಾ ಎಂ.ವಿ, ಹಿರಿಯ ಮಾರುಕಟ್ಟೆ ಮೇಲ್ವಿಚಾರಕ ಎನ್. ಮಂಜುನಾಥ, ಅಧೀಕ್ಷಕ ಮಲ್ಲಿಕಾರ್ಜುನ ಎ.ಕೆ, ಲೆಕ್ಕ ಅಧೀಕ್ಷಕ ಎಂ. ಎನ್. ಬೆಣ್ಣಿ ಸ್ಥಳದಲ್ಲಿ ಬೀಡುಬಿಟ್ಟು ಪುನಃ ಮಾರುಕಟ್ಟೆ ಪ್ರಾರಂಭಿಸಿದರು. ಈ ತರಹದ ಪ್ರಮಾದವಾಗದಂತೆ ನಿಗಾವಹಿಸಲಾಗುವುದೆಂದು ಅಧಿಕಾರಿಗಳು ಭರವಸೆ ಕೊಟ್ಟ ಮೇಲೆಯೇ ರೈತರು ಪ್ರತಿಭಟನೆ ಹಿಂದಕ್ಕೆ ಪಡೆದರು.



## ದ್ವಿತೀಯ ಪಿಯುಸಿ ಪರೀಕ್ಷೆ ಶುಭಾರಂಭ

**(1ನೇ ಪುಟದಿಂದ)** ನೊಂದಾಯಿಸಿದ್ದ 17,473 ವಿದ್ಯಾರ್ಥಿಗಳ ಪೈಕಿ 596 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು.

ಪರೀಕ್ಷೆಯಲ್ಲಿ ಯಾವುದೇ ಅಕ್ರಮಗಳು ನಡೆಯದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿತ್ತು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ ತಿಳಿಸಿದ್ದಾರೆ.


**ಮನೆ ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 ಪೂರ್ವ ದಿಕ್ಕಿನ ಮನೆ ಗ್ರೌಂಡ್ ಫ್ಲೋರ್‌ನಲ್ಲಿ 2BHKಮನೆ, ಮೊದಲನೇ ಮಹಡಿಯಲ್ಲಿ ರೂಂ ವಿತ್ ಅಟ್ಯಾಚ್ಡ್ ಬಾತ್ ರೂಂ ಇರುವ ಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ.
ಮೊ. 94482-33389

**ಸೈಟ್ ಮಾರಾಟಕ್ಕೆ**
30x40 ದಕ್ಷಿಣ, ಜೆನಿಸಸ್ ರೆಸಾರ್ಟ್ ಎದುರು, ಕರ್ನಾಟಕ ಗೃಹ ಮಂಡಳಿ ಮೊದಲನೇ ಟ್ಯಾಂಕ್ ಹತ್ತಿರ
H. ವಿಶ್ವನಾಥ್ (ಮಾಲೀಕರು)
96329 72156
(ಬ್ರೋಕರ್‌ಗಳಿಗೆ ಅವಕಾಶವಿಲ್ಲ)

**ಕುರಿಗಳು ಮಾರಾಟಕ್ಕಿವೆ**
ಶ್ರೀ ಮಾರುತಿ ಕುರಿ ಸಾಕಾಣಿಕೆ ಕೇಂದ್ರ
ನಮ್ಮಲ್ಲಿ ಉತ್ತಮವಾಗಿ ಸಾಕಿದ ಆರೋಗ್ಯಕರ ನಾಟಿ ಟಗರುಗಳು ಸಿಗುತ್ತವೆ. ದಾವಣಗೆರೆಯಿಂದ ಕೇವಲ 4 ಕಿ.ಮೀ. ಐಗೂರು ರಸ್ತೆ.
ಸಂಪರ್ಕಿಸಿ 70196 02944

**WANTED**
Accountant for Electronics Shop
BHERAV DISTRIBUTOR
Jaydev Circle Davangere
Minimum 2 year experience in Account handling. Boys only
Qualification : B.Com or MBA
90365-74144

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಫೈನಾನ್ಷಿಯಲ್ ಫೀಲ್ಡ್‌ನಲ್ಲಿ ಟೆಲಿಕಾಲರ್ಸ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ
85535 28445

**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗೂ ಕಾಫಿ ಮಾಡುವವರು ಹಾಗೂ ಜವಾಬ್ದಾರಿ ಕೆಲಸಗಾರ ಬೇಕಾಗಿದ್ದಾರೆ.
ಸ್ಥಳ: ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ.
99004 38052, 97401 53513

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್. 'ಎ' ಬ್ಲಾಕ್ ಪೂರ್ವ 44x60, 40x65, ವಿದ್ಯಾನಗರ ಪಶ್ಚಿಮ 30x60, ಉತ್ತರ 30x60, ತರಳಬಾಳು ಬಡಾವಣೆ, ಪಶ್ಚಿಮ 40x60, ಅಂಬಿಕಾ ನಗರ ಪೂರ್ವ 30x40 (ಅಕ್ಕ-ಪಕ್ಕ)
ಐಗೂರು ವಿಜಯಕುಮಾರ
99457 02495

**ಮನೆಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪಶ್ಚಿಮ 30x45 (ಡುಪ್ಲೆಕ್ಸ್) ಸರಸ್ವತಿ ಬಡಾವಣೆ (ನಿಂಚನ ಸ್ಕೂಲ್ ಹತ್ತಿರ) ಉತ್ತರ 22x85 (3 floor 60 ಸಾವಿರ ಬಾಡಿಗೆ ಬರುತ್ತೆ) ಎಸ್.ಎಸ್. 'ಬಿ' ಬ್ಲಾಕ್ ದಕ್ಷಿಣ 30x40 (ಡುಪ್ಲೆಕ್ಸ್)
ಐಗೂರು ವಿಜಯಕುಮಾರ
99457 02495

**ಸೈಟ್ ಮಾರಾಟಕ್ಕೆ**
(KHB) ಹೌಸಿಂಗ್ ಬೋರ್ಡ್ 12x18 ಮೀಟರ್ (40x60) ರೆಸಿಡೆನ್ಸ್ ಸೈಟ್ ಪಶ್ಚಿಮ 67 ಲಕ್ಷ
ಕಿರಣ್ ಭೂಸ್ನೂರ್
97315 63409, 98440 63409
ರಿಜಿಸ್ಟರ್ ಖರ್ಚು + ಕಮೀಷನ್ ಸೇರಿ

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 30x50 ಉತ್ತರ, 30x50 ಪಶ್ಚಿಮ, 40x60 ಉತ್ತರ, 120 ಅಡಿ ರಸ್ತೆಗೆ ಹೊಂದಿಕೊಂಡು 40x60 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಕಾರುಗಳು ಮಾರಾಟಕ್ಕಿವೆ**
Honda City 2.8 ಲಕ್ಷಕ್ಕೆ
Renault Duster 5.5 ಲಕ್ಷಕ್ಕೆ
VW Vento Diesel 4.8 ಲಕ್ಷಕ್ಕೆ
Hyundai Creta 8.5 ಲಕ್ಷಕ್ಕೆ
ದೈವಿಕ್ ಐನಳ್ಳಿ
9945643223

**ಮನೆ ಮಾರಾಟಕ್ಕೆ**
ಸರಸ್ವತಿ ನಗರ 30x40 ಮೇಲೆ ಕೆಳಗೆ MNK 30x40, ಭೂಮಿಕಾ 30x46 ಡುಪ್ಲೆಕ್ಸ್, 20x30 ಮೇಲೆ -ಕೆಳಗೆ ಮನೆಗಳು ಮಾರಾಟಕ್ಕಿವೆ. ಬಾಡಿಗೆ ಬರುವಂತಹ ಮನೆಗಳು ಇವೆ.
ಏಜೆಂಟ್ : ಶಾಂತಪ್ಪ ಪೂಜಾರಿ
99647 29123

ಶ್ರೀ ದುಗ್ಗಮ್ಮದೇವಿ ಪ್ರಸನ್ನ
**ಟಗರು ಮಾರಾಟಕ್ಕಿದೆ**
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
98450-35710, 77607-39990

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕ, ಯುವತಿಯರು ಬೇಕಾಗಿದ್ದಾರೆ.
95913 46737

**ಮನೆ ಲೀಸ್‌ಗೆ ಇದೆ**
ದಾವಣಗೆರೆ ಸಿಟಿ ಲೋಕಿಕೆರೆ ರಸ್ತೆಯ ಎಸ್.ಎ. ರವೀಂದ್ರನಾಥ್ ಬಡಾವಣೆ, ಫರ್ನಿಷ್ಡ್ 24 ಗಂಟೆ ನೀರಿನ ಸೌಲಭ್ಯ ಲಿಫ್ಟ್ ಮತ್ತು ಕಾರ್ ಪಾರ್ಕಿಂಗ್ ಇರುವ 2BHK ಮನೆ ಲೀಸ್‌ಗೆ ಇದೆ (15 ಲಕ್ಷ ರೂ.)
99865 38099

**ಅಡಿಕೆ ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 15 ನಿಮಿಷ ದೂರದಲ್ಲಿರುವ ದೊಡ್ಡ ಓಬಜ್ಜಿಹಳ್ಳಿ ಊರಿನಲ್ಲಿ ಸಿಮೆಂಟ್ ರಸ್ತೆಗೆ ಐದು ಎಕರೆ 3 ವರ್ಷದ ಅಡಿಕೆ ತೋಟ ಮಾರಾಟಕ್ಕಿದೆ, ತೋಟಕ್ಕೆ ಚಾನೆಲ್ ನೀರು ಜೊತೆಗೆ ಮೂರು ಬೋರ್ ಮತ್ತು ಗೆಸ್ಟ್ ಹೌಸ್ ಲಭ್ಯವಿದೆ. ಸಂಪರ್ಕಿಸಿ :
+91 84949 33669

**ಮನೆ ಬಾಡಿಗೆ/ಲೀಸ್‌ಗೆ**
1ನೇ ಮಹಡಿಯಲ್ಲಿರುವ ಡಬಲ್ ಬೆಡ್ ರೂಂ ಮನೆ ಬಾಡಿಗೆ/ಲೀಸ್‌ಗೆ ಇದೆ. ಎಂಸಿಸಿ ಬಿ ಬ್ಲಾಕ್, ಕುವೆಂಪು ನಗರ, ಬಾಪೂಜಿ ಸ್ಕೂಲ್ ಹಿಂಭಾಗ
98444 24777
98441 69999

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಸೇಲ್ಸ್ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ.
9448929897

**WANTED TEACHER/ CO-ORDINATORE**
Any Degree with Good Communicative English.
TATVA ACADEMY
10th main, MCC `A' Block, Davangere.
99641 10736

**2BHK HOUSE FOR RENT**
Ist Floor, North Face, Car Parking, New Nittuvalli badavane, Davangere.
97435 59986
Veg Only

**ಸೈಟು ಮಾರಾಟಕ್ಕಿವೆ**
ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ ಪೋದಾರ್ ಶಾಲೆ ಹತ್ತಿರ, 47x29 ಅಡಿ ಉತ್ತರ (4500per sqft) ಮತ್ತು ಹರಿಹರ, ಶೇರಾಪುರ ಬಡಾವಣೆ, (ಬೆಂಕಿ ನಗರ ಹತ್ತಿರ) 87. 12x49ಅಡಿ, ಉತ್ತರ (2200 per sqft)
99024 12406

**WANTED**
for Aradhya Group of Business
*Receptionists for Hotel & Makeup Studio (Good looking & Bold Girls can Apply -4 Post)* Accountant-1 * Graphic Designer-2
(Min. 1 year Experience)
Attractive Salary with Accommodation
No Calls, Only send your resumes along with photo to kkumar.su@gmail.com & do whatsapp to 90666 74666

**WANTED**
Any Degree with Computer knowledge is must. for Male & Female.
Contact : Exllent Electronics
#2137/1, 4th Main, 3rd Cross, MCC `A' Block, Davanagere - 577004
98865 15100


**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 20x30, 20x30 ಅಕ್ಕ-ಪಕ್ಕ ದಕ್ಷಿಣ ದಿಕ್ಕಿನ ಸೈಟ್‌ಗಳು
95384 86666
63605 94165

**ಮನೆ ಬಾಡಿಗೆ/ಲೀಸ್‌ಗೆ**
1ನೇ ಮಹಡಿಯಲ್ಲಿರುವ ಡಬಲ್ ಬೆಡ್ ರೂಂ ಮನೆ ಬಾಡಿಗೆ /ಲೀಸ್ ಗೆ ದೊರೆಯುತ್ತದೆ. (ಸಸ್ಯಹಾರಿಗಳಿಗೆ ಮಾತ್ರ)
ವಿಳಾಸ: ದೇವರಾಜ್ ಅರಸ್ ಬಡಾವಣೆ, ಸಿ ಬ್ಲಾಕ್, 1ನೇ ಕ್ರಾಸ್, ದಾವಣಗೆರೆ.
98448 59101

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಹಾಕಲು ಹುಡುಗರು ಬೇಕಾಗಿದ್ದಾರೆ. ಪೆಟ್ರೋಲ್ ಬಂಕ್‌ನಲ್ಲಿ ಮ್ಯಾನೇಜರ್ ಹುದ್ದೆಗೆ ಬೇಕಾಗಿದ್ದಾರೆ. ಮದುವೆಯಾದವರಿಗೆ ಆದ್ಯತೆ.
70266 43088

**ಸೈಟು ಮಾರಾಟಕ್ಕಿದೆ**
ದಾವಣಗೆರೆ ರವೀಂದ್ರನಾಥ ಬಡಾವಣೆಯಲ್ಲಿ 50x60 North-East, Corner site ಮಾರಾಟಕ್ಕಿವೆ, (Shashi detergent ಬಟ್ಟೆ ಸೋಪ್ ಫ್ಯಾಕ್ಟರಿ ಎದುರುಗಡೆ) ಸಂಪರ್ಕಿಸಿ :
90195 54141, 98454 17444

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.6.3.2024ರ ಬುಧವಾರ
ದಿ.7.3.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಸೈಟು ಮಾರಾಟಕ್ಕಿದೆ**
ಡಾಲರ್ಸ್ ಕಾಲೋನಿಯಲ್ಲಿ 40x62 ದಕ್ಷಿಣ-ಪಶ್ಚಿಮ ಕಾರ್ನರ್ ಸೈಟ್ (ಮಧ್ಯವರ್ತಿಗಳಿಗೆ ಅವಕಾಶವಿಲ್ಲ) ಆಸಕ್ತಿಯುಳ್ಳವರು ನೇರವಾಗಿ ಸೈಟ್ ಓನರ್‌ಗೆ ಸಂಪರ್ಕಿಸಿ:
63621 81509

**SITE FOR SALE**
Measuring 30 X 40 facing west in Shiva Parvathi Layout are for sale directly from owner.
Brokers not allowed.
98450 98987, 63635 52021

**ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ**
ನಂ.1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಮಾಡುತ್ತಾರೆ. ಗಾಂಧಿ ಸರ್ಕಲ್, ಆಹಾರ 2000, ದಾವಣಗೆರೆ.
89716 99826

**HOUSE FOR RENT**
Ground floor, 2BHK Fully furnished, East facing with solar is available for rent at 4th main, 6th cross, J. C. Extension, Harihar.
80501 63846

**OFFICE SPACE FOR RENT**
1200 sq ft (30x40) First floor 4th main, (old post office Road) KB Extn, Davangere-2.
8867476070, 8867476078

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಸರ್ಕಾರಿ ನೌಕರರ ಬಡಾವಣೆಯಲ್ಲಿ ಬಿ ಬ್ಲಾಕ್ 30x50, 30x40 ಪೂರ್ವ, ಎಸ್.ಎಸ್. ಬಡಾವಣೆಯ ಬಿ ಬ್ಲಾಕ್‌ನಲ್ಲಿ 40x60 ದಕ್ಷಿಣ ಶ್ರೀ ಸಾಮಾನ್ಯದಲ್ಲಿ 30x43 ಉತ್ತರ 40 ಅಡಿ ರಸ್ತೆಗೆ, ಬೈಪಾಸ್ ಸರ್ವೀಸ್ ರಸ್ತೆಗೆ, 30x55 ದಕ್ಷಿಣ (ಕಮರ್ಷಿಯಲ್) ಸರ್ಕಾರಿ ನೌಕರರ ಪಕ್ಕದ ಬಡಾವಣೆಯಲ್ಲಿ 30x40 ಪೂರ್ವ 2 ಸೈಟ್‌ಗಳು ಮಾರಾಟಕ್ಕೆ ಇವೆ.
ಸಂಪರ್ಕಿಸಿ. ಸುರೇಶ್ ಪಿ.ಎಸ್. ಶಾಮನೂರು
84314 00907

ಓಂ ಶ್ರೀ ಕೊಡಂಗಲ್ಲೂರು ಭಗವತಿದೇವಿ
**ಜ್ಯೋತಿಷ್ಯಾಲಯ**
ಪಂಡಿತ್ ಸಂತೋಷ್ ಗುರೂಜಿ
ವ್ಯಾಪಾರ, ಆರೋಗ್ಯ, ಲಗ್ನ, ಸಂತಾನ, ಮಾಟ-ಮಂತ್ರ, ಸಾಲದ ಬಾಧೆ, ಮಾನಸಿಕ ಚಿಂತೆ, ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳು ಇದ್ದರೆ ಶಾಶ್ವತ ಪರಿಹಾರ. ಶತಃ ಸಿದ್ಧ.
99728 37663
ವಿಳಾಸ : ಡೆಂಟಲ್ ಕಾಲೇಜು ರಸ್ತೆ, ದಾವಣಗೆರೆ.

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಬೇಕಾಗಿದ್ದಾರೆ**
ಅನುಭವವುಳ್ಳ ಯುವತಿಯರು ಬಟ್ಟೆ ಅಂಗಡಿ ಕೆಲಸಕ್ಕೆ ಜಾಕಿ ಶೋ ರೂಮ್‌ಗೆ ಬೇಕಾಗಿದ್ದಾರೆ, ದರ್ಶನ್ ಆರ್ಕೆಡ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ. ಸಂಪರ್ಕಿಸಿ :
08192 224842
ಸಮಯ : 11Am to 6 Pm
ಬರುವಾಗ ದಯವಿಟ್ಟು ಪೋಟೋ, ಬಯೋಡೇಟಾ ತನ್ನಿ

**HOUSE TO LET**
2 BHK, 1st Floor, #1653/28, 4th cross, UMESH NILAYA Siddaveerappa Badavane, Davanagere.
94486 66677

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
Davanagere.
bhoomikamatrimony.com
77603 16576
90080 55813

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇರಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

Use Summer Holidays Effectively
**Kids Summer Computer Education**
Learn Computer Basics, MS-Office & Internet
IATM Computers
2nd main, Akkamahadevi Samaja Complex, PJ Exten, 6th Cross, Ram & Co. Circle, Davangere.
Call for more Information
98867 63469, 90367 19573



# ಪಾದಯಾತ್ರೆ: ಸಂಖ್ಯೆಯಲ್ಲ, ಭಕ್ತಿ ಮುಖ್ಯ

**ಕೊಟ್ಟೂರು ಪಾದಯಾತ್ರಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಹೆಬ್ಬಾಳು ಶ್ರೀ**

ದಾವಣಗೆರೆ,ಮಾ.1- ಪಾದಯಾತ್ರೆಯಲ್ಲಿ ಎಷ್ಟು ಜನ ಭಕ್ತರು ಪಾಲ್ಗೊಳ್ಳುತ್ತಾರೆ ಎಂಬುದು ಮುಖ್ಯವಾಗುವುದಿಲ್ಲ. ಶ್ರದ್ಧಾ ಭಕ್ತಿಯಿಂದ ಭಾಗವಹಿಸುವುದಷ್ಟೇ ಅಲ್ಲದೇ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಎಚ್ಚರವಹಿಸುವ ಅಗತ್ಯವಿದೆ ಎಂದು ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಹೇಳಿದರು.

ನಗರದ ಚೌಕಿಪೇಟೆಯ ಶ್ರೀ ಬಕ್ಕೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ದಾವಣಗೆರೆಯಿಂದ ಕೊಟ್ಟೂರಿಗೆ ಹಮ್ಮಿಕೊಂಡಿದ್ದ 45 ನೇ ವರ್ಷದ 'ಸಮಗ್ರ ಪಾದಯಾತ್ರೆಯ ಬೀಳ್ಕೊಡುಗೆ' ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಇದೀಗ ಬಿಸಿಲಿನ ತಾಪ ದಿನೇ ದಿನೇ ಹೆಚ್ಚಾಗುತ್ತಿದೆ. ಈಗಾಲೇ 35-36 ಡಿಗ್ರಿ ಬಿಸಿಲು ದಾವಣಗೆರೆ ಜಿಲ್ಲೆಯಲ್ಲಿದೆ. ಈ ಸಂದರ್ಭದಲ್ಲಿ ಕೊಟ್ಟೂರಿಗೆ ಪಾದಯಾತ್ರೆ ಮಾಡುತ್ತಿರುವ ಭಕ್ತರು ಬರಿಗಾಲಿನಲ್ಲಿ ಹೋಗದೇ ಸುರಕ್ಷತೆ ದೃಷ್ಟಿಯಿಂದ ಪಾದರಕ್ಷೆಯನ್ನು ಬಳಕೆ ಮಾಡಿದರೆ ತಪ್ಪೇನಿಲ್ಲ. ಕೊಟ್ಟೂರೇಶ್ವರ ನಿಮಗೇನು ಶಾಪ ಹಾಕುವುದಿಲ್ಲ. ಶ್ರದ್ಧಾ ಭಕ್ತಿ ಮುಖ್ಯ. ಹೋದ ವರ್ಷಕ್ಕೂ ಈ ವರ್ಷಕ್ಕೂ ವ್ಯಕ್ತಿಯ ಆಚಾರ, ವಿಚಾರ, ನಡೆ-ನುಡಿಯಲ್ಲಿ ಏನು ಬದಲಾವಣೆ ಆಗಿದೆ ಎನ್ನುವುದನ್ನು ಅವಲೋಕಿಸಬೇಕಾಗಿದೆ ಎಂದು ಹೇಳಿದರು.

ಪಂಡರಾಪುರಕ್ಕೆ ಪಾದಯಾತ್ರೆ ಹೋಗುವ ಭಕ್ತರು ತಂಡೋಪ ತಂಡವಾಗಿ ಕೊರಳಲ್ಲಿ ತಾಳವನ್ನು ನೇತುಹಾಕಿಕೊಂಡು, ತಂಬೂರಿ ಮತ್ತು ಡೋಲು ಹಿಡಿದು ಭಕ್ತಿಯಿಂದ ಭಜನೆ ಮಾಡುತ್ತಾ, ಧ್ಯಾನದಲ್ಲಿ ನಿರತರಾಗಿರುತ್ತಾರೆ. ಆ ರೀತಿಯ ಭಜನೆ ಮಾಡುವುದಾಗಲಿ, ಧ್ಯಾನದಲ್ಲಿ ನಿರತರಾಗಿರುವುದನ್ನು ಕೊಟ್ಟೂರು ಪಾದಯಾತ್ರಿಗಳಲ್ಲಿ ಕಾಣಲು ಸಾಧ್ಯವಿಲ್ಲ. ದಾನಿಗಳು ನೀಡಿದ ಪ್ರಸಾದ, ನೀರು, ಔಷಧೀಯ ವಸ್ತುಗಳನ್ನು ಅಪವ್ಯಯ ಮಾಡುವುದಲ್ಲದೇ, ಎಲ್ಲೆಂದರಲ್ಲಿ ಬಿಸಾಡುವ ಪರಿಪಾಠವಿದೆ. ಇದನ್ನು ಬಿಡಬೇಕು. ಸ್ವಚ್ಛತೆ ಜೊತೆಗೆ ಆರೋಗ್ಯ ಕಾಪಾಡಿಕೊಳ್ಳುವ ಕಡೆಗೆ ಗಮನವಿರಬೇಕೆಂದರು.

ಅವಶ್ಯವಿರುವಷ್ಟನ್ನು ಮಾತ್ರ ಪ್ರಸಾದವಾಗಲೀ, ನೀರಾಗಲೀ, ಔಷಧಿಯನ್ನಾಗಲೀ ಬಳಕೆ ಮಾಡಿ, ಶ್ರದ್ಧಾ ಭಕ್ತಿಯಿಂದ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವ ಮೂಲಕ ಶ್ರೀ ಕೊಟ್ಟೂರೇಶನ ಕೃಪೆಗೆ ಪಾತ್ರರಾಗುವಂತೆ ಕರೆ ನೀಡಿದರು.

ಕೂಡ್ಲಿಗಿ ತಾಲ್ಲೂಕು ಅಯ್ಯನಹಳ್ಳಿ ಹಿರೇಮಠದ ಶ್ರೀ ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸಿ ಮಾತನಾಡಿ, ವರ್ಷದಿಂದ ವರ್ಷಕ್ಕೆ ಕೊಟ್ಟೂರು ಪಾದಯಾತ್ರಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ ಈ ಬಾರಿಯ ಬಿರು ಬಿಸಿಲು ಇದ್ದು, ಪಾದಯಾತ್ರೆ ಎಷ್ಟು ಮುಖ್ಯವೋ, ಮನುಷ್ಯನಿಗೆ ಆರೋಗ್ಯವೂ ಕೂಡ ಅಷ್ಟೇ ಮುಖ್ಯವಾಗುತ್ತದೆ ಎಂದರು.

ಕೊಟ್ಟೂರೇಶ್ವರನ ಆಶೀರ್ವಾದ ಬೇಡುವ ಮೂಲಕ ಭಕ್ತಿಯಿಂದ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವ ಮೂಲಕ ಆರೋಗ್ಯದ ಕಡೆ ಕಾಳಜಿ ಇರಲಿ. ನೀರನ್ನು ಹಿತ, ಮಿತವಾಗಿ ಬಳಸಿರಿ, ಯಾವುದನ್ನೂ ಸಹ ಅಪವ್ಯಯ ಮಾಡದಿರಿ ಎಂದು ಹಿತ ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಲೆಕ್ಕ ಪರಿಶೋಧಕರೂ ಆದ ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ ಮಾತನಾಡಿ, ಭಕ್ತ ಸಮೂಹ ಕೊಟ್ಟೂರು ಪಾದಯಾತ್ರೆಯಲ್ಲಿ ಅತ್ಯಂತ ಉತ್ಸಾಹದಿಂದ ಭಾಗವಹಿಸುತ್ತಿದ್ದು, ದಾನಿಗಳು ನೀಡುವ ಪ್ರಸಾದ, ನೀರು, ತಂಪು ಪಾನೀಯ, ಔಷಧಿ ವಸ್ತುಗಳನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಮನವಿ ಮಾಡಿದರು.

ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಅಧ್ಯಕ್ಷ ಕಣಕುಪ್ಪಿ ಮುರುಗೇಶಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ದೂಡಾ ಮಾಜಿ ಅಧ್ಯಕ್ಷ ದೇವರಮನಿ ಶಿವಕುಮಾರ್, ವೀರಶೈವ ಕೋ-ಆಪ್ ಸೊಸೈಟಿ ಅಧ್ಯಕ್ಷ ಅಜ್ಜಂಪುರಶೆಟ್ರು ಮೃತ್ಯುಂಜಯ, ಡಾ. ಜಿ.ಸಿ. ಬಸವರಾಜ್, ಟಿ.ಜಿ. ಬಕ್ಕೇಶಪ್ಪ, ವಿನುತಾ ರವಿ, ಶಿವಯೋಗಿ, ಜಯರಾಜ್, ಮಲ್ಲಾಬಾದಿ ಗುರುಬಸವರಾಜ್, ಬಿ. ಚಿದಾನಂದ್, ಆರ್.ಜಿ. ದತ್ತರಾಜ್ ಮತ್ತಿತರರು ಉಪಸ್ಥಿತರಿದ್ದರು.

# ಶಿಥಿಲಗೊಂಡ ಭದ್ರಾ ಕಾಲುವೆಗಳ ಮರು ನಿರ್ಮಾಣಕ್ಕೆ ಶಾಸಕ ಕೆ.ಎಸ್.ಬಸವಂತಪ್ಪ ಆಗ್ರಹ

- ಸದನದಲ್ಲಿ ರೈತರ ಪರ ಧ್ವನಿ ಎತ್ತಿದ ಶಾಸಕರು
- ಕಾಲುವೆಗಳನ್ನು ಪರಿಶೀಲಿಸಿ ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸುವುದಾಗಿ ಕಂದಾಯ ಸಚಿವ ಕೃಷ್ಣಭೈರೇಗೌಡ ಭರವಸೆ



ದಾವಣಗೆರೆ, ಮಾ. 1- ಮಾಯಕೊಂಡ ಕ್ಷೇತ್ರ ಮತ್ತು ಭದ್ರಾ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಶಿಥಿಲಗೊಂಡ ಕಾಲುವೆಗಳು, ಬ್ರಿಡ್ಜ್ ಗಳನ್ನು ಮರು ನಿರ್ಮಾಣ ಮಾಡಬೇಕೆಂದು ಶಾಸಕ ಕೆ.ಎಸ್. ಬಸವಂತಪ್ಪ ಸರ್ಕಾರವನ್ನು ಒತ್ತಾಯಿಸಿದರು.

ವಿಧಾನಸಭೆ ಅಧಿವೇಶನದಲ್ಲಿ ಈ ವಿಷಯ ಕುರಿತು ಧ್ವನಿ ಎತ್ತಿದ ಶಾಸಕ ಕೆ.ಎಸ್.ಬಸವಂತಪ್ಪ, ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯಲ್ಲಿ 10 ಸಾವಿರ ಹೆಕ್ಟೇರ್ ಪ್ರದೇಶ ಮತ್ತು ಭದ್ರಾ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ 42 ಸಾವಿರ ಹೆಕ್ಟೇರ್ ನೀರಾವರಿ ಪ್ರದೇಶ ಹೊಂದಿದ್ದು, ಈ ಒಟ್ಟು ನೀರಾವರಿ ಪ್ರದೇಶ ರೈತರ ಜೀವನಾಡಿಯಾಗಿದೆ.

1958ರಲ್ಲಿ ನಿರ್ಮಿಸಿದ ಭದ್ರಾ ಕಾಲುವೆಗಳು, ಬ್ರಿಡ್ಜ್ ಗಳು ಶಿಥಿಲಗೊಂಡು ಹಾಳಾಗಿವೆ. ಈವರೆಗೂ ಕಾಲುವೆಗಳು ಮತ್ತು ಬ್ರಿಡ್ಜ್ ಗಳನ್ನು ಮರು ನಿರ್ಮಾಣ ಅಥವಾ ಆಧುನೀಕರಣ ಮಾಡಿಲ್ಲ.

ಜೊತೆಗೆ 26 ಕಿ.ಮೀ. ದೂರ ಮುಖ್ಯ ಕಾಲುವೆ ಗಳು ಮತ್ತು 09 ವಿತರಣೆ ಕಾಲುವೆಗಳು ಇವೆ. 178 ಕಾಮಗಾರಿಗಳಿದ್ದರೆ, 7 ಹೊಸ ಕಾಮಗಾರಿ ಮತ್ತು 121 ಹಳೆಯ ಕಟ್ಟಡಗಳ ಕಾಮಗಾರಿಗಳು ಇವೆ. ಈ ಎಲ್ಲಾ ಕಾಮಗಾರಿಗಳನ್ನು 1958ರಲ್ಲಿ ನಿರ್ಮಾಣ ಮಾಡಲಾಗಿದೆ. ಹಾಳಾಗಿರುವ ಕಾಲುವೆಗಳಲ್ಲಿ ನೀರು ಸಮರ್ಪಕವಾಗಿ ಹರಿಯದೇ ರೈತರು ಬೆಳೆ ಬೆಳೆಯಲು ಅನಾನುಕೂಲವಾಗಿದೆ.

ಈ ಹಿಂದೆ ನಲ್ಕುಂದ ಬಳಿಯಿರುವ ಕಾಲುವೆ ಬ್ರಿಡ್ಜ್ ಒಡೆದು ನೀರು ರೈತರ ಗದ್ದೆಗಳಿಗೆ ನುಗ್ಗಿ ಗದ್ದೆಗಳು ಜಲಾವೃತಗೊಂಡು ಫಸಲಿಗೆ ಬಂದ ಭತ್ತ ಹಾಳಾಗಿ ಲಕ್ಷಾಂತರ ರೂ.ನಷ್ಟ ಅನುಭವಿಸುವಂತಾಗಿತ್ತು. ಕೂಡಲೇ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಅನುದಾನ ಬಿಡುಗಡೆ ಮಾಡಿ ಬ್ರಿಡ್ಜ್ ನಿರ್ಮಾಣ ಮಾಡಿಸಿ ರೈತರ ಹಿತ ಕಾಪಾಡಿದ್ದರು. ಈ ನಿಟ್ಟಿನಲ್ಲಿ ಸರ್ಕಾರ ಶಿಥಿಲಗೊಂಡ ಭದ್ರಾ ಕಾಲುವೆಗಳು ಮತ್ತು ಬ್ರಿಡ್ಜ್ ಗಳನ್ನು ಮರು ನಿರ್ಮಾಣ ಮಾಡಿ ರೈತರ ಹಿತ ಕಾಪಾಡಬೇಕೆಂದು ಮನವಿ ಮಾಡಿದರು.

ಶಾಸಕರ ಒತ್ತಾಯಕ್ಕೆ ಪ್ರತಿಕ್ರಿಯೆ ನೀಡಿದ ಕಂದಾಯ ಸಚಿವ ಕೃಷ್ಣಭೈರೇಗೌಡ, ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯಲ್ಲಿ ಭದ್ರಾ ಕಾಲುವೆಗಳು ಮತ್ತು ಬ್ರಿಡ್ಜ್ ಗಳನ್ನು ನಿರ್ಮಿಸಿ 60 ವರ್ಷ ಕಳೆದಿದೆ. ಕಾಲ ಕ್ರಮೇಣ ಕಾಲುವೆಗಳು, ಬ್ರಿಡ್ಜ್ ಗಳು ಶಿಥಿಲಗೊಂಡು ರೈತರು ಬೆಳೆ ಬೆಳೆಯಲು ಸಾಕಷ್ಟು ತೊಂದರೆ ಆಗಿದೆ ಎಂದು ರೈತರ ಸಮಸ್ಯೆಗಳ ಬಗ್ಗೆ ಸದನದಲ್ಲಿ ಶಾಸಕ ಬಸವಂತಪ್ಪ ಅವರು ಪ್ರಸ್ತಾಪ ಮಾಡಿರುವುದು ಸತ್ಯವಾಗಿದೆ.

1958ರಲ್ಲಿ ನಿರ್ಮಾಣ ಮಾಡಿದ ಕಾಲುವೆಗಳು ಮತ್ತು ಬ್ರಿಡ್ಜ್ ಗಳನ್ನು ಮರು ನಿರ್ಮಾಣ ಮಾಡಬೇಕೇ ಅಥವಾ ಆಧುನೀಕರಣಗೊಳಿಸಬೇಕೆಂಬ ಕುರಿತು ಕಾಲುವೆಗಳು ಮತ್ತು ಬ್ರಿಡ್ಜ್ ಗಳನ್ನು ಪರಿಶೀಲನೆ ಮಾಡಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ. ಅಧಿಕಾರಿಗಳು ವರದಿ ಸಲ್ಲಿಸಿದ ಮೇಲೆ ಹಣದ ಲಭ್ಯತೆ ಆಧಾರದಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

## ಅರಣ್ಯ ವಾಸಿಗಳ ರಕ್ಷಣೆಗೆ ಒತ್ತಾಯ...

ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ಬಸವಾಪಟ್ಟಣ ಹೋಬಳಿಯ ಅರಣ್ಯ ಪ್ರದೇಶದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದವರು ಕಳೆದ 60 ವರ್ಷಗಳಿಂದ ಮನೆ ಕಟ್ಟಿಸಿಕೊಂಡು ವಾಸವಾಗಿದ್ದಾರೆ. 1975-76ರಲ್ಲಿ ಸೇಂದಿವನ, ಗೋಮಾಳ ಆಗಿತ್ತು. ಅದರ ಹಿಂದೆನೇ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ನಂತರ ಅರಣ್ಯ ವಾಪ್ತಿಗೆ ಬಂದಿದೆ. ಇದರಿಂದ ಅಲ್ಲಿನ ನಿವಾಸಿಗಳಿಗೆ ಬಹಳ ತೊಂದರೆ ಆಗಿದೆ. ಅಲ್ಲದೇ ಅರಣ್ಯ ಅಧಿಕಾರಿಗಳು ಭಾರೀ ಕಿರುಕುಳ ನೀಡುತ್ತಿದ್ದಾರೆ. ಇದು ಕೇವಲ ಮಾಯಕೊಂಡ ಕ್ಷೇತ್ರದ ಸಮಸ್ಯೆಯಲ್ಲ, ರಾಜ್ಯದ ಅರಣ್ಯ ಪ್ರದೇಶದಲ್ಲಿ ವಾಸಿಸುವ ಪ್ರತಿಯೊಬ್ಬರ ಸಮಸ್ಯೆಯಾಗಿದೆ.

ಈ ಹಿಂದೆ ಸಿಎಂ ಆಗಿದ್ದ ಸಿದ್ದರಾಮಯ್ಯ ಮತ್ತು ಕಾಗೋಡು ತಿಮ್ಮಪ್ಪ ಅವರು ಅರಣ್ಯ ಭೂಮಿ ಉಳುಮೆ ಮಾಡಿದವರು, ಮನೆಗಳನ್ನು ಕಟ್ಟಿಸಿಕೊಂಡವರನ್ನು ರಕ್ಷಣೆ ಮಾಡಲಾಗಿತ್ತು. ಈ ನಿಟ್ಟಿನಲ್ಲಿ ಸರ್ಕಾರ ಅದೇ ರೀತಿಯಲ್ಲಿ ಕಾಯ್ದೆ ತಿದ್ದುಪಡಿ ತಂದು ಬಡವರನ್ನು ರಕ್ಷಣೆ ಮಾಡಬೇಕೆಂದು ಅಧಿವೇಶನದಲ್ಲಿ ಶಾಸಕ ಕೆ.ಎಸ್.ಬಸವಂತಪ್ಪ ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು, ಶಿವಮೊಗ್ಗದ ವ್ಯಾಪ್ತಿಯ ಭದ್ರಾವತಿ ವಿಭಾಗದ ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ ಹೋಬಳಿ ವ್ಯಾಪ್ತಿಯ ಶೃಂಗಾರಬಾಬು ಗ್ರಾಮದ ಸರ್ವೇ ನಂಬರ್ 16ರಲ್ಲಿ ಶೃಂಗಾರಬಾಬು ಮುಳ್ಳುನಾಯಕನಹಳ್ಳಿ ಮೀಸಲು ಅರಣ್ಯ ಪ್ರದೇಶದಲ್ಲಿ 44 ಎಕರೆ,34 ಗುಂಟೆ ಒತ್ತುವರಿಯಾಗಿದೆ. ಈ ಒತ್ತುವರಿ ತೆರವಿಗಾಗಿ ಈಗಾಗಲೇ ಅಧಿಕಾರಿಗಳು ನಿಯಮಾನುಸಾರ ಕರ್ನಾಟಕ ಅರಣ್ಯ ಕಾಯ್ದೆ 1960ರಡಿ ಪ್ರಕರಣ ದಾಖಲಿಸಿದ್ದಾರೆ. ಇಲ್ಲಿ ಮನೆ ಇರಲಿ, ಮತ್ತೊಂದಿರಲಿ ಏಕಾಏಕಿ ತೆರವುಗೊಳಿಸುವುದಿಲ್ಲ. ಈ ಬಗ್ಗೆ ವಿಚಾರಣೆ ಮಾಡಿ ತೆರವುಗೊಳಿಸುವಂತ ಕಾರ್ಯ ಮಾಡುತ್ತಾರೆ. ಈಗ ಶಾಸಕ ಬಸವಂತಪ್ಪ ಅವರು ನಮ್ಮ ಗಮನಕ್ಕೆ ತಂದಿದ್ದಾರೆ. ಅವರೊಂದಿಗೆ ಚರ್ಚಿಸಿ, ಕಾಯ್ದೆಯ ಅನುಸಾರ ಏನೇನು ಮಾಡಬಹುದು ಎಂದು ಕೂಲಂಕುಶವಾಗಿ ಚರ್ಚಿಸಿ, ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು.

# ನಗರದಲ್ಲಿ ಇಂದು 'ಯುವಕರ ನಡೆ ಮೋದಿ ಕಡೆ' ಕಾರ್ಯಕ್ರಮ



ದಾವಣಗೆರೆ, ಮಾ.1- ನರೇಂದ್ರ ಮೋದಿ ಅಭಿಮಾನಿ ಬಳಗದಿಂದ ಯುವಕರ ನಡೆ ಮೋದಿಯ ಕಡೆ ಬೈಕ್ ರ್‍ಯಾಲಿ ಹಾಗೂ ಸಭಾ ಕಾರ್ಯಕ್ರಮವನ್ನು ನಾಳೆ ದಿನಾಂಕ 2ರ ಶನಿವಾರ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶಿವರಾಜ ಪಾಟೀಲ್ ತಿಳಿಸಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶನಿವಾರ ಸಂಜೆ 4 ಗಂಟೆಗೆ ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಸ್ಥಾನದಿಂದ ಬೈಕ್ ರ್‍ಯಾಲಿಗೆ ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಶಾಸಕ ಎಸ್.ಎ. ರವೀಂದ್ರನಾಥ್ ಚಾಲನೆ ನೀಡಲಿದ್ದಾರೆ ಎಂದರು.

ಸಂಜೆ 6 ಗಂಟೆಗೆ ಆಂಜನೇಯ ಬಡಾವಣೆಯ ಶ್ರೀ ಆಂಜನೇಯ ದೇವಸ್ಥಾನದ ಮುಂಭಾಗ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಬಾಲ ವಾಗ್ಮಿ ಹಾರಿಕಾ ಮಂಜುನಾಥ್ ದಿಕ್ಸೂಚಿ ಭಾಷಣ ಮಾಡಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕಾರ್ಯಕ್ರಮ ಆಯೋಜಕ ಅತಿಥ್ ಅಂಬರ್‌ಕರ್, ಜಿಲ್ಲಾ ಸಾಮಾಜಿಕ ಮಾಧ್ಯಮ ಸಂಚಾಲಕ ಜಿ. ಕೊಟ್ರೇಶ್ ಗೌಡ, ಕೆ.ಎನ್. ಹನುಮಂತಪ್ಪ ಉಪಸ್ಥಿತರಿದ್ದರು.

# ನಗರದಲ್ಲಿ ಇಂದಿನಿಂದ ಸಾಂಸ್ಕೃತಿಕ ಸ್ಪರ್ಧೆ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ವನಿತಾ ಸಮಾಜದ ವಾರ್ಷಿಕೋತ್ಸವದ ಅಂಗವಾಗಿ ಇಂದಿನಿಂದ ನಾಲ್ಕು ದಿನ ವಿವಿಧ ಸಂಸ್ಥೆಗಳ ಸದಸ್ಯೆಯರಿಗೆ ಸಾಂಸ್ಕೃತಿಕ ಸ್ಪರ್ಧೆಗಳನ್ನು ವನಿತಾ ಸಮಾಜದಲ್ಲಿ ಏರ್ಪಡಿಸಲಾಗಿದೆ.

ಆಶು ಭಾಷಣ ಸ್ಪರ್ಧೆ, ವಚನಗಳು, ದಿನಪತ್ರಿಕೆಯಿಂದ ಕ್ರಿಯಾತ್ಮಕ ರಚನೆ, ರಸ ಪ್ರಶ್ನೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ವಿವರಕ್ಕೆ ಸಂಪರ್ಕಿಸುವ ಮೊಬೈಲ್ ಸಂಖ್ಯೆ : 99649 13202.

# ಹರಪನಹಳ್ಳಿಯಲ್ಲಿ ಇಂದು - ನಾಳೆ ಧಾರ್ಮಿಕ ಕಾರ್ಯಕ್ರಮ



ಹರಪನಹಳ್ಳಿ ಪಟ್ಟಣದ ಜೋಯಿಸರಕೇರಿ ಯಲ್ಲಿರುವ ಶಂಕರ ಮಠದಲ್ಲಿ ಇಂದು ಮತ್ತು ನಾಳೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಶಂಕರ ಸೇವಾ ಸಮಿತಿಯ ಅಧ್ಯಕ್ಷ ಯು. ರಾಘವೇಂದ್ರ ಪ್ರಸಾದ್ ತಿಳಿಸಿದ್ದಾರೆ.

ಇಂದು ಹರಿಹರಪುರ ಆದಿ ಶಂಕರಚಾರ್ಯ ಶಾರದಾ ಲಕ್ಷ್ಮಿನರಸಿಂಹ ಕ್ಷೇತ್ರದ ಶ್ರೀ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ನೇತೃತ್ವದಲ್ಲಿ ಶೋಭಯಾತ್ರೆ ನಡೆಯಲಿದೆ.

ನಾಳೆ ಮಠದಲ್ಲಿ ನೂತನವಾಗಿ ನವೀಕರಣಗೊಂಡ ಶ್ರೀ ಶಂಕರ ಭಗವತ್ಪಾದಾಚಾರ್ಯರ ಮೂರ್ತಿ ಹಾಗೂ ನೂತನ ಶಿಲಾ ಮಂಟಪ ಶ್ರೀ ಗುರುದೇವ ದತ್ತಾತ್ರೇಯ ನೂತನ ಶಿಲಾ ವಿಗ್ರಹ ಹಾಗೂ ಶ್ರೀ ಮಹಾಗಣಪತಿ ಮತ್ತು ಶಾರದಾಂಬ ದೇವಿಯ ಪುನರ್ ಪ್ರತಿಷ್ಠಾಪನೆ ಕಾರ್ಯ ಜರುಗಲಿದೆ ಎಂದು ಶಂಕರ ಸೇವಾ ಸಮಿತಿಯ ಎಸ್. ಶ್ಯಾಮಸುಂದರ ಭಟ್ ವಿವರಿಸಿದ್ದಾರೆ.

# ರಕ್ಷಣಾ ವಲಯಕ್ಕಾಗಿ 39 ಸಾವಿರ ಕೋಟಿ ರೂ. ಖರೀದಿಗೆ ಐದು ಒಪ್ಪಂದ

ನವದೆಹಲಿ, ಮಾ. 1 - ರಕ್ಷಣಾ ವಲಯಕ್ಕೆ 39,125 ಕೋಟಿ ರೂ.ಗಳ ಖರೀದಿ ಮಾಡುವ ಐದು ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಇದರಲ್ಲಿ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಗಳ ಖರೀದಿ ಸಹ ಸೇರಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ರಕ್ಷಣಾ ಕಾರ್ಯದರ್ಶಿ ಗಿರಿಧರ್ ಅರಮನೆ ಅವರ ಉಪಸ್ಥಿತಿಯಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಬ್ರಹ್ಮೋಸ್ ಕ್ಷಿಪಣಿಗಳ ಖರೀದಿಗಾಗಿ ಎರಡು ಪ್ರತ್ಯೇಕ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

ಮಿಗ್ -29 ವಿಮಾನಗಳಿಗಾಗಿ ಏರೋ ಇಂಜಿನ್ ಖರೀದಿ, ರಡಾರ್ ಸೇರಿದಂತೆ ಹಲವು ಶಸ್ತ್ರಗಳ ಖರೀದಿಗಾಗಿ ಒಪ್ಪಂದ ಮಾಡಿಕೊಳ್ಳಲಾಗಿದೆ.

# ಬಿಜೆಪಿಗೆ ಬಿ.ಆರ್.ಎಸ್.ನ ಎರಡನೇ ಸಂಸದ ಸೇರ್ಪಡೆ

ನವದೆಹಲಿ, ಮಾ. 1- ಭಾರತ ರಾಷ್ಟ್ರ ಸಮಿತಿಯ ಸಂಸದ ಬಿ.ಬಿ. ಪಾಟೀಲ್ ಅವರು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಲೋಕಸಭಾ ಚುನಾವಣೆಗೆ ಮುಂಚೆ ಬಿಜೆಪಿಗೆ ಸೇರಿರುವ ಎರಡನೇ ಬಿ.ಆರ್.ಎಸ್. ಸಂಸದ ಅವರಾಗಿದ್ದಾರೆ. ಬಿ.ಆರ್.ಎಸ್. ಸಂಸದ ಪೊತುಗಂಟಿ ರಾಮುಲು ಅವರು ನಿನ್ನೆಯಷ್ಟೇ ಬಿಜೆಪಿಗೆ ಸೇರಿದ್ದರು. ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿ.ಆರ್.ಎಸ್. ಪರಾಭವಗೊಂಡಿತ್ತು. ನಂತರ ಹಲವಾರು ನಾಯಕರು ಪಕ್ಷ ತೊರೆದಿದ್ದು, ಬಿಜೆಪಿ ಇಲ್ಲವೇ ರಾಜ್ಯದಲ್ಲಿ ಆಡಳಿತದಲ್ಲಿರುವ ಕಾಂಗ್ರೆಸ್ ಸೇರುತ್ತಿದ್ದಾರೆ.

# ಬೆಂಬಲ ಬೆಲೆಗೆ ಆಗ್ರಹಿಸಿ, ವಿದ್ಯುಚ್ಛಕ್ತಿ ಖಾಸಗೀಕರಣ ವಿರೋಧಿಸಿ ಕೇಂದ್ರದ ವಿರುದ್ಧ ರೈತರ ಪ್ರತಿಭಟನೆ

ದಾವಣಗೆರೆ, ಮಾ. 1 - ರೈತರ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಕಾಯ್ದೆ ಜಾರಿ ಮಾಡಬೇಕು ಮತ್ತು ವಿದ್ಯುಚ್ಛಕ್ತಿ ಖಾಸಗೀಕರಣ ಮಾಡಬಾರದು ಎಂದು ಆಗ್ರಹಿಸಿ, ರಾಜ್ಯ ರೈತ ಸಂಘ, ಹಸಿರುಸೇನೆ ಹುಚ್ಚವ್ವನಹಳ್ಳಿ ಮಂಜುನಾಥ್ ಬಣ ಮತ್ತು ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಶುಕ್ರವಾರ ನಗರದಲ್ಲಿ ರೈಲು ತಡೆ ಯತ್ನ ನಡೆಸಲಾಯಿತು.

ಜಯದೇವ ವೃತ್ತದಿಂದ ಹೊರಟ ನೂರಾರು ಪ್ರತಿಭಟನಾಕಾರರು ರೈಲು ನಿಲ್ದಾಣದತ್ತ ನಡೆದು ರೈಲು ತಡೆಗೆ ಮುಂದಾದರು. ಉಪವಿಭಾಗಾಧಿಕಾರಿಗಳ ಕಚೇರಿ ಮುಂದೆ ಪೊಲೀಸರು ಪ್ರತಿಭಟನಾ ನಿರತರನ್ನು ತಡೆದರು. ಈ ವೇಳೆ ರೈತರು ಮತ್ತು ಪೊಲೀಸರ ಮಧ್ಯೆ ಮಾತಿನ ಚಕಮಕಿ ನಡೆಯಿತು. ನಂತರ ಸ್ಥಳಕ್ಕೆ ಆಗಮಿಸಿದ ರೈಲು ನಿಲ್ದಾಣ ಪ್ರಬಂಧಕರಿಗೆ ಮನವಿ ಸಲ್ಲಿಸಲಾಯಿತು.



ಪ್ರತಿಭಟನೆಯ ನೇತೃತ್ವ ವಹಿಸಿದ್ದ ಸಂಘದ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಮಾತನಾಡಿ, ದೆಹಲಿಯಲ್ಲಿ ನಡೆಯುತ್ತಿರುವ ರೈತರ ಹೋರಾಟ ಬೆಂಬಲಿಸಲು ರಾಜ್ಯದ ಎಲ್ಲಾ ರೈತರು ದೆಹಲಿಗೆ ಹೋಗಲು ಸಾಧ್ಯವಿಲ್ಲ. ರೈತರ ಪರವಾಗಿ ಕೆಲಸ ಮಾಡಬೇಕಾದ ಸಂಸದರು ನಿದ್ರೆ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ರೈತರ ಮೇಲೆ ಗೂಂಡಾಗಿರಿ ಮಾಡುತ್ತಿದೆ. ಸರ್ಕಾರಕ್ಕೆ ರೈತರು ಬಿಸಿ ಮುಟ್ಟಿಸಲು ಈ ರೀತಿಯ ಚಳವಳಿ ನಡೆಸುವುದು ಅನಿವಾರ್ಯವಾಗಿದೆ ಎಂದರು.

ಆಲೂರು ಪರಶುರಾಮ್ ಮಾತನಾಡಿ, ಕೂಡಲೇ ಕೃಷಿ ಉತ್ಪನ್ನಗಳ ಬೆಂಬಲ ಬೆಲೆ ಖಾತರಿ ಕಾನೂನು ಜಾರಿ ಮಾಡದಿದ್ದರೆ ಚುನಾವಣೆಯಲ್ಲಿ ಕೇಂದ್ರ ಸರ್ಕಾರದ ಮರಣ ಶಾಸನವನ್ನು ರೈತರು ಬರೆಯಬೇಕಾಗುತ್ತದೆ. ಕೇಂದ್ರ ಸರ್ಕಾರಕ್ಕೆ ಬಂಡವಾಳ ಶಾಹಿಗಳ ಸಾಲ ಮನ್ನಾ ಮಾಡಲು ಹೆಚ್ಚಿನ ಕಾಳಜಿ ಇರುತ್ತದೆ. ಆದರೆ ರೈತರ ಸಾಲ ಮನ್ನಾ ವಿಚಾರ, ಸ್ವಾಮಿನಾಥನ್ ವರದಿ ಜಾರಿ, ಬೆಂಬಲ ಬೆಲೆ, ರೈತರಿಗೆ ಪಿಂಚಣಿ ಮೊದಲಾದ ರೈತ ಪರ ಕಾರ್ಯಕ್ರಮಗಳನ್ನು ಜಾರಿಗೆ ತರಲು ಮನಸು ಇಲ್ಲ ಎಂದರು.

ರೈತರು ನ್ಯಾಯ ಕೇಳಿದರೆ ಗೋಲಿಬಾರ್ ಮಾಡುತ್ತಾರೆ. ಇದು ದೇಶದ ರೈತನಿಗೆ ಮಾಡುವ ಅಪಮಾನವಾಗಿದೆ. ರೈತರು ಗುಲಾಮರೂ ಅಲ್ಲ, ಭಿಕ್ಷುಕರೂ ಅಲ್ಲ. ಯಾವುದೇ ರಾಜಕೀಯ ಪಕ್ಷಕ್ಕೆ ಅಧಿಕಾರ ಶಾಶ್ವತ ಅಲ್ಲ. ಕೂಡಲೇ ಸಮಸ್ಯೆ ಬಗೆಹರಿಸಿ ಅನ್ನದಾತನ ಋಣ ತೀರಿಸಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಿಟುವಳ್ಳಿ ಪೂಜಾರ ಅಂಜಿನಪ್ಪ ಮಾತನಾಡಿ, ದೆಹಲಿಯಲ್ಲಿ ನಡೆಯುತ್ತಿರುವ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯತರ) ಸಂಘಟನೆಯ ಹೋರಾಟದ ರೈತರು ಯಾರೂ ದೇಶದ್ರೋಹಿಗಳಲ್ಲ.

ದೆಹಲಿಗೆ ಹೋಗುವಾಗ ಮಾರ್ಗ ಮಧ್ಯದಲ್ಲಿ ಭೂಪಾಲ್‌ನಲ್ಲಿ ತಡೆದು ಪೊಲೀಸರ ಮೂಲಕ ಬಂಧಿಸಿ ಮೂರು ದಿನದ ನಂತರ ವಾಪಸ್ ಕಳಿಸಲಾಗಿದೆ. ದೆಹಲಿಯಲ್ಲಿ ಹೋರಾಟ ಮಾಡುವ ಪಂಜಾಬ್, ಹರಿಯಾಣ ರೈತರನ್ನು ದೇಶ ವಿರೋಧಿಗಳು ಎನ್ನುತ್ತಾರೆ.

ಇದರ ಅರ್ಥ ಏನು? ರೈತರು ಸಮಸ್ಯೆ ಬಗೆಹರಿಯುವ ತನಕ ಚಳವಳಿಯಿಂದ ಹಿಂದೆ ಸರಿಯುವುದಿಲ್ಲ ಎಂದು ಎಚ್ಚರಿಕೆ ನೀಡುತ್ತಿದ್ದೇವೆ. ಪಂಜಾಬ್, ಹರಿಯಾಣ, ಉತ್ತರ ಪ್ರದೇಶ್, ರಾಜಸ್ಥಾನ ರೈತರ ಹೋರಾಟಕ್ಕೆ ನಾವು ಸದಾ ಜೊತೆಯಾಗಿರುತ್ತೇವೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಪಾಮೇನಹಳ್ಳಿ ಗೌಡ್ರು ಶೇಖರಪ್ಪ, ಕೋಗಲೂರು ಕುಮಾರ್, ರಾಜನಹಟ್ಟಿ ರಾಜು, ಗೌಡಗೊಂಡನಹಳ್ಳಿ ಸತೀಶ, ಕೋಲ್ಕುಂಟೆ ಬಸವರಾಜ್, ಕುಕ್ಕುವಾಡ ಬಸವರಾಜ್, ಕುರ್ಕಿ ಹನುಮಂತ, ಹೂವಿನ ಮಡು ನಾಗರಾಜ್, ಬುಳ್ಳಾಪುರ ನಾಗರಾಜ್, ಹುಚ್ಚವ್ವನಹಳ್ಳಿ ಪ್ರಕಾಶ್, ಗುಮ್ಮನೂರು ಭೀಮೇಶ್, ರುದ್ರೇಶ್, ಹೊನ್ನೂರು ಮಂಜುನಾಥ್, ಐಗೂರು ಈರಣ್ಣ ಸೇರಿದಂತೆ ನೂರಕ್ಕೂ ಅಧಿಕ ರೈತರು ಭಾಗವಹಿಸಿದ್ದರು.

# ಬಾಪೂಜಿ ಮಕ್ಕಳ ಆಸ್ಪತ್ರೆ 'ಎದೆ ಹಾಲಿನ ಭಂಡಾರ'ದ ಉದ್ಘಾಟನಾ ಸಮಾರಂಭ ಮುಂದೂಡಿಕೆ


ದಾವಣಗೆರೆ,ಮಾ.1- ನಗರದ ಬಾಪೂಜಿ ಮಕ್ಕಳ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ನಾಳೆ ಶನಿವಾರ ಮಧ್ಯಾಹ್ನ ಹಮ್ಮಿಕೊಳ್ಳಲಾಗಿದ್ದ ನವೀಕರಣಗೊಂಡ ಅತ್ಯಾಧುನಿಕ ಶಸ್ತ್ರಚಿಕಿತ್ಸಾ ಕೇಂದ್ರ, ನವಜಾತ ಶಿಶುಗಳ ಆರೈಕೆ ಕೇಂದ್ರ ಮತ್ತು ಎದೆ ಹಾಲಿನ ಭಂಡಾರದ ಉದ್ಘಾಟನಾ ಸಮಾರಂಭವನ್ನು ಅನಿವಾರ್ಯ ಕಾರಣಗಳಿಂದಾಗಿ ಮುಂದಿನ ವಾರಕ್ಕೆ ಮುಂದೂಡಲಾಗಿದೆ ಎಂದು ಬಾಪೂಜಿ ಮಕ್ಕಳ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಜಿ. ಗುರುಪ್ರಸಾದ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ



ಎಸ್.ಎಸ್. ಬಡಾವಣೆ ಎ ಬ್ಲಾಕ್, ಶಾಂತಿನಗರ, ಕುಂದುವಾಡ ರಸ್ತೆ, ಬಸವೇಶ್ವರ ಬಡಾವಣೆ, ಬಾಪೂಜಿ ಎಂಬಿಎ ಕಾಲೇಜ್, ಅಥಣಿ ಕಾಲೇಜ್, ಕುಂದುವಾಡ ಕೆರೆ, ಶಾಮನೂರು ರಸ್ತೆ, ಎಸ್.ಎಸ್. ಲೇಔಟ್ 'ಎ' ಬ್ಲಾಕ್, ಕುವೆಂಪು ನಗರ, ಸಿದ್ದವೀರಪ್ಪ ಬಡಾವಣೆ, ಎಂ.ಸಿ.ಸಿ ಬಿ ಬ್ಲಾಕ್, ಬಿ.ಐ.ಇ.ಟಿ ರಸ್ತೆ, ಎಸ್.ಎನ್. ಲೇಔಟ್, ಲಕ್ಷ್ಮಿ ಫ್ಲೋರ್ ಮಿಲ್, ಗ್ಲಾಸ್ ಹೌಸ್ ಏರಿಯಾ, ನಿಜಲಿಂಗಪ್ಪ ಬಡಾವಣೆ ಎ ಮತ್ತು ಬಿ ಬ್ಲಾಕ್ , ರಿಂಗ್‌ರೋಡ್, ಕುಂದವಾಡ ರಸ್ತೆ, ಯಲ್ಲಮ್ಮ ನಗರ, ವಿನೋಬನಗರ 4ನೇ ಮೇನ್, 3ನೇ ಮೇನ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

ಶಾಮನೂರು ರಸ್ತೆ, ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು, ಪಿ.ಜೆ. ಬಡಾವಣೆಯ 5, 6, 7, 8 ಮತ್ತು 9ನೇ ಮುಖ್ಯ ರಸ್ತೆಗಳು, ಎಂ.ಸಿ.ಸಿ. ಎ ಬ್ಲಾಕ್, ವಿನೋಬನಗರ 1, 2 ಮತ್ತು 3ನೇ ಮುಖ್ಯ ರಸ್ತೆ, 1ನೇಮುಖ್ಯ ರಸ್ತೆಯಿಂದ 17ನೇ ಕ್ರಾಸ್‌ವರೆಗೆ, ಮುದ್ದಳ್ಳಿ ತೋಟ, ಸೂಪರ್ ಮಾರ್ಕೆಟ್, ಬಾಪೂಜಿ ಬ್ಯಾಂಕ್ (ಹದಡಿ ರಸ್ತೆ), ಬಾಪೂಜಿ ಡೆಂಟಲ್ ಕಾಲೇಜ್ ಮತ್ತು ಬಾಪೂಜಿ ಆಸ್ಪತ್ರೆ, ಜೆ.ಜೆ.ಎಂ. ಮೆಡಿಕಲ್ ಕಾಲೇಜ್, ಚಿಗಟೇರಿ ಜಿಲ್ಲಾ ಆಸ್ಪತ್ರೆ ಮತ್ತು ವಸತಿ ಗೃಹಗಳು, ಮ್ಯಾಕ್ಸ್ ಷೋರೂಂ, ಬಿ.ಎಸ್. ಚನ್ನಬಸಪ್ಪ ಎಕ್ಸ್‌ಕ್ಲೂಸಿವ್ ಷೋರೂಂ, ಕೆ.ಎಫ್.ಸಿ, ಡಿ.ಆರ್.ಎಮ್. ಕಾಲೇಜ್, ಎ.ಆರ್.ಜಿ. ಕಾಲೇಜ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 11 ರಿಂದ ಸಂಜೆ 3 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ
ಜಿಲ್ಲಾಡಳಿತ, ವಿಜಯನಗರ

ಮಾನವ ಧರ್ಮಕ್ಕೆ ಜಯವಾಗಲಿ । ॥ ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ॥ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ॥

ವಿಜಯನಗರ ಜಿ॥ ಕೊಟ್ಟೂರು ತಾ॥ ಶ್ರೀಕ್ಷೇತ್ರ ಕೊಟ್ಟೂರು ಪಟ್ಟಣದಲ್ಲಿ


ಶ್ರೀ ಗುರುಬಸವೇಶ್ವರಸ್ವಾಮಿಯ ಮಹಾರಥೋತ್ಸವವು

ದಿನಾಂಕ 04-03-2024ರ ಸೋಮವಾರ ಸಾಯಂಕಾಲ

ವಿಜೃಂಭಣೆಯಿಂದ ಜರುಗುತ್ತದೆ. ಭಕ್ತಾದಿಗಳು ರಥೋತ್ಸವಕ್ಕೆ ಆಗಮಿಸಿ ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

ಶ್ರೀ ಮನ್ನಿರಂಜನ ಜಗದ್ಗುರು ಶ್ರೀ ಶಂಕರ ಮಹಾಸ್ವಾಮಿಗಳು ಹಾಗೂ ಶ್ರೀ ಮ.ನಿ.ಪ್ರ. ಶಿವಪ್ರಕಾಶ ಕೊಟ್ಟೂರು ದೇವರು, ಕ್ರಿಯಾ ಮೂರ್ತಿಗಳು ಹಾಗೂ ಕೊಟ್ಟೂರು ಕಟ್ಟಿಮನಿ ದೈವದವರು.

ಶ್ರೀ ಬಸವರಾಜೇಂದ್ರ ಹೆಚ್. ಭಾ.ಆ.ಸೇ., ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.
ಶ್ರೀ ಎಂ.ಎಸ್. ದಿವಾಕರ್ ಭಾ.ಆ.ಸೇ., ಮಾನ್ಯ ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ.
ಶ್ರೀ ಹೆಚ್. ಗಂಗಾಧರಪ್ಪ, ಸಹಾಯಕ ಆಯುಕ್ತರು (ಪ್ರಭಾರ), ಹಿಂ.ಧಾ.ಸಂ. ಮತ್ತು ಧ.ದ. ಬಳ್ಳಾರಿ/ವಿಜಯನಗರ
ಶ್ರೀ ಸಿ.ಹೆಚ್.ಎಂ. ಗಂಗಾಧರ, ಪ್ರಧಾನ ಧರ್ಮಕರ್ತರು, ಶ್ರೀ ಗುರುಬಸವೇಶ್ವರ ಸ್ವಾಮಿ ದೇವಸ್ಥಾನ, ಕೊಟ್ಟೂರು
ಶ್ರೀ ಕೃಷ್ಣಪ್ಪ ಬಿ.ಎಂ., ಕಾರ್ಯ ನಿರ್ವಹಣಾಧಿಕಾರಿಗಳು, ಶ್ರೀ ಗುರುಬಸವೇಶ್ವರ ಸ್ವಾಮಿ ದೇವಸ್ಥಾನ, ಕೊಟ್ಟೂರು



## ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

**ಶಾಂತಲಾ**

ದಿ ವೆಡ್ಡಿಂಗ್ ಮಾಲ್....

ಚಾಮರಾಜ ಪೇಟೆ, ದಾವಣಗೆರೆ.

96861 95327


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 01.03.2024 ರಂದು ದೈವಾಧೀನರಾದ

**ಡಾ॥ ಮಂಜುನಾಥ್ ಜಾಜೂರ್**

ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

Indian Society of Anaesthesiologist
Davangere City Branch

## ಆರನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ...

**ಡಾ॥ ಸರ್ವಮಂಗಳ ಎಂ. ಕೌಜಲಗಿ**


ಸಹ ಪ್ರಾಧ್ಯಾಪಕರು, ಸಮುದಾಯ ವಿಭಾಗ, ಜೆಜೆಎಂ ಮೆಡಿಕಲ್ ಕಾಲೇಜ್

ಪತಿ : ಡಾ॥ ಎಂ.ಬಿ. ಕೌಜಲಗಿ,
ಪ್ರೊಫೆಸರ್, ಮಕ್ಕಳ ವಿಭಾಗ, ಜೆಜೆಎಂ ಮೆಡಿಕಲ್ ಕಾಲೇಜ್

ಮಕ್ಕಳು : ಕು॥ ಹೃತಿಕಾ ಮತ್ತು ಕು॥ ನಿಕಿತಾ

ಶ್ರೀಮತಿ ಅರುಂಧತಿ, ಶ್ರೀ ಅರುಣ್ ಕೌಜಲಗಿ ಮತ್ತು ಅನುಪ್ ಕೌಜಲಗಿ ಮತ್ತು ಕುಟುಂಬ ವರ್ಗದವರು.

## ಪುಣ್ಯಸ್ಮರಣೆ



ಜನನ : 1937 ನಿಧನ : 2019

**ಲಿಂ॥ ಶ್ರೀ ಎ.ಸಿ. ಜಯಣ್ಣನವರು**

ಬೆಲ್ಲದ ವ್ಯಾಪಾರಿಗಳು ಹಾಗೂ
ಖಜಾಂಚಿ, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

- ಧರ್ಮಪತ್ನಿ : ಶ್ರೀಮತಿ ರಾಜೇಶ್ವರಿ ಎ.ಸಿ. ಜಯಣ್ಣ
- ಶ್ರೀಮತಿ ಎ.ಜೆ. ಲತಾ ಮತ್ತು ಡಾ॥ ಎಂ. ಚಂದ್ರಶೇಖರ್ ಹಾಗೂ ಮಕ್ಕಳು
- ಶ್ರೀಮತಿ ಸಪ್ನ ಎ.ಜೆ. ಸಂದೀಪ್ ಹಾಗೂ ಮಕ್ಕಳು
- ಶ್ರೀಮತಿ ಡಾ॥ ಎ.ಜೆ. ಸ್ಮಿತ ಮತ್ತು ಡಾ॥ ಪಿ.ಎಸ್. ಬಾಲು ಹಾಗೂ ಮಕ್ಕಳು
- ಶ್ರೀಮತಿ ಡಾ॥ ಎ.ಜೆ. ನೀತಾ, ಪ್ರಾಂಶುಪಾಲರು, ಬಿಇಎ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ. ಮತ್ತು ಡಾ॥ ಬಿ.ಇ. ರಂಗಸ್ವಾಮಿ ಹಾಗೂ ಮಕ್ಕಳು, ಕುಲಸಚಿವರು (ಆಡಳಿತ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
- ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು.

## ಭಾವಪೂರ್ಣ ಶ್ರದ್ಧಾಂಜಲಿ



ಹೆಸರಾಂತ ಅಕ್ಕಿ ವರ್ತಕರು, ಅಕ್ಕಿ ವರ್ತಕರ ಸಂಘದ ಮಾಜಿ ಅಧ್ಯಕ್ಷರೂ, ಕಿತ್ತೂರು ಜಯಣ್ಣ ಟ್ರೇಡರ್ಸ್ ಮಾಲೀಕರರೂ, ಸ್ನೇಹಿತರೂ ಆಗಿದ್ದ

**ಕಿತ್ತೂರು ಜಯಣ್ಣ**

ಅವರು ದಿನಾಂಕ 01.03.2024ರ ಶುಕ್ರವಾರ ನಮ್ಮನ್ನು ಅಗಲಿದ್ದಾರೆ. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ ಹಾಗೂ ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

• ಯಶವಂತರಾವ್ ಜಾಧವ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷರು
• ಎಂ.ಪರಪ್ಪ ಮಾಳಗಿ
• ಕೆ.ಎಂ. ಪ್ರಭು ಸ್ವಾಮಿ • ಎಂ. ದೊಡ್ಡಪ್ಪ,
• ಗೌತಮ್ ಕುಮಾರ್ • ಹುಕ್ಕುಂಚಂದ್






ತೋಟಗಾರಿಕೆ ಇಲಾಖೆಯ ವತಿಯಿಂದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ **ಎಸ್.ಎಸ್. ಮಲ್ಲಿಕಾರ್ಜುನ್** ಶಿಫಾರಸ್ಸಿನ ಮೇರೆಗೆ

ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಳ

**ಭೂಮಿ ಪೂಜೆ ಸಮಾರಂಭ**

ಸನ್ಮಾನ್ಯ **ಡಾ. ಶಾಮನೂರು ಶಿವಶಂಕರಪ್ಪನವರು**
ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ಇವರಿಂದ

**02.03.2024 ಶನಿವಾರದಂದು**

| | ಕಾಮಗಾರಿಗಳ ವಿವರ | ಸಮಯ |
|---|---|---|
| 01 | ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ 7ನೇ ವಾರ್ಡ್‌ನ ಶಾಮನೂರು ಬಸವರಾಜಪ್ಪ ಉದ್ಯಾನವನ ಅಭಿವೃದ್ಧಿ ಕಾಮಗಾರಿ. | 12.30 |
| 02 | 1ನೇ ವಾರ್ಡ್‌ನ ಬಿ.ಎನ್. ಲೇಔಟ್ ಉದ್ಯಾನವನ ಅಭಿವೃದ್ಧಿ ಕಾಮಗಾರಿ. | 01.00 |
| 03 | 1ನೇ ವಾರ್ಡ್‌ನ ತಾಜ್ ಪ್ಯಾಲೇಸ್ ಹಿಂಭಾಗದ ಉದ್ಯಾನವನ ಅಭಿವೃದ್ಧಿ ಕಾಮಗಾರಿ. | 01.15 |
| 04 | 3ನೇ ವಾರ್ಡ್‌ನ ಪಾರ್ವತಮ್ಮ ಬಡಾವಣೆ ಉದ್ಯಾನವನ ಅಭಿವೃದ್ಧಿ ಕಾಮಗಾರಿ. | 01.45 |

ಈ ಕಾಮಗಾರಿಯ ಭೂಮಿ ಪೂಜೆಗೆ ಆಗಮಿಸುತ್ತಿರುವ ಮಹಾಪೌರರು, ಸ್ಥಾಯಿ ಸಮಿತಿ ಅಧ್ಯಕ್ಷರುಗಳು, ಮಹಾನಗರ ಪಾಲಿಕೆ ಎಲ್ಲಾ ಸದಸ್ಯರು, ಆಯುಕ್ತರು, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮತ್ತು ನಿರ್ಮಿತಿ ಕೇಂದ್ರದ ಅಧಿಕಾರಿಗಳು, ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ **ಹೃದಯಪೂರ್ವಕ ಸ್ವಾಗತ ಸುಸ್ವಾಗತ**



ಬ್ರಾಂಡ್ಸ್ ಗಾರ್ಮೆಂಟ್ಸ್ ಪ್ರದರ್ಶನ

**ಪ್ರಪ್ರಥಮ ಭಾರಿಗೆ ದಾವಣಗೆರೆ ನಗರದಲ್ಲಿ ಭಾರಿ ಪ್ರದರ್ಶನ ಮತ್ತು ಮಾರಾಟ**

ಪುರುಷರ, ಮಹಿಳೆಯರ ಹಾಗೂ ಮಕ್ಕಳ ಸಿದ್ಧ ಉಡುಪುಗಳು

ಸೂಚನೆ : ಕಂಪನಿಯ ಆರ್ಥಿಕ ಹಣ ಕಾಸಿನ ಬಿಕ್ಕಟ್ಟಿನಿಂದ ಹಾಗೂ ಪಾರ್ಟಿ ಮಿತಿಮೀರಿದ ಬಾಕಿ ಹಣದ ಪಾವತಿ ಇರುವುದರಿಂದ ಎಲ್ಲಾ ಹೊಸ ಗಾರ್ಮೆಂಟ್ಸ್‌ಗಳನ್ನು ಅತಿ ಕಡಿಮೆ ದರದಲ್ಲಿ ಮಾರಾಟ ಮಾಡಲು ಕಂಪನಿಯು ನಿರ್ಧರಿಸಿದೆ. ಆದ್ದರಿಂದ ದಾವಣಗೆರೆ ಗ್ರಾಹಕರಿಗೆ ಭಾರಿ ರಿಯಾಯಿತಿ ದರದಲ್ಲಿ ಮಾರಟ ಮಾಡಲಾಗುತ್ತಿದೆ. ಬ್ರಾಂಡೆಡ್ ರೆಡಿಮೇಡ್ ಉಡುಪುಗಳ ಭಾರಿ ರಿಯಾಯಿತಿ ಮಾರಾಟವು

ಕೇವಲ 4 ದಿನಗಳ ವರೆಗೆ. ಈ ಅವಕಾಶವನ್ನು ಕಳೆದು ಕೊಳ್ಳಬೇಡಿ.

**ದಾವಣಗೆರೆ ಗ್ರಾಹಕರಿಗೆ ವಿನಮ್ರ ಮನವಿ ದಯವಿಟ್ಟು ಭೇಟಿ ನೀಡಿ.**

UPTO 80% DISCOUNT **ರವರೆಗೆ ಭಾರಿ ರಿಯಾಯಿತಿ ಮಾರಾಟ**

ಇಂದು ಏನಾಗುತ್ತಿದಯೋ ಅದು ಹಿಂದೆಂದೂ ಸಂಭವಿಸಿಲ್ಲ

VanHeusen
ಬಾಲಕಿಯರ,* ಮಹಿಳೆಯರ* ಹಾಗೂ ಪುರುಷರ* ಒಳ ಉಡುಪುಗಳು
**ಕೇವಲ ರೂ. 40/-*, 80/-* ಹಾಗೂ 150/-* ಮಾತ್ರ**

ಪುರುಷರ ಸಿದ್ಧ ಉಡುಪುಗಳು (ಗಾರ್ಮೆಂಟ್ಸ್)
ಟಿ-ಶರ್ಟ್, ಶರ್ಟ್, ಪ್ಯಾಂಟ್, ಬರ್ಮುಡಾ, ಟ್ರಾಕ್ ಪ್ಯಾಂಟ್ ಇತ್ಯಾದಿ
ಕೇವಲ ರೂ. 199/- ರಿಂದ 399/-

DANIEL HECHTER HIGHLANDER INDIGO NATION BEAT IZOD INDIAN TERRAIN BARE Pepe Jeans LONDON JOHN MILLER SCULLERS JACK & JONES ONLY VERO MODA

ಪುರುಷರ ಪ್ರೀಮಿಯಂ ಸಿದ್ಧ ಉಡುಪುಗಳು (ಗಾರ್ಮೆಂಟ್ಸ್) MRP Upto ರೂ. 5999/-
ಶರ್ಟ್, ಟಿ-ಶರ್ಟ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಕುರ್ತ, ಲೋವರ್, ಜಾಕೆಟ್, ಪುಲೋವರ್ ಇತ್ಯಾದಿ
ಕೇವಲ ರೂ. 499/- ರಿಂದ 999/-

ಮಹಿಳೆಯರ ಸಿದ್ಧ ಉಡುಪುಗಳು (ಗಾರ್ಮೆಂಟ್ಸ್) MRP Upto ರೂ. 2999/-
ಟಾಪ್ಸ್, ಪೈಜಾಮ, ಲೆಗೀನ್ಸ್, ಫ್ಲಾಜಾ, ಜಾಕೆಟ್, ಲಾಂಗ್ ಕುರ್ತಿ, ವೆಸ್ಟ್ರನ್ ಔಟ್ ಫಿಟ್, ಲಾಂಗ್ ಸ್ಕರ್ಟ್ ಇತ್ಯಾದಿ
ಕೇವಲ ರೂ. 149 /- ರಿಂದ 599/-

ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳಿಗೆ ಸಿದ್ಧ ಉಡುಪುಗಳು (ಗಾರ್ಮೆಂಟ್ಸ್)
ಟಿ-ಶರ್ಟ್, ಟಾಪ್ಸ್, ಪೈಜಾಮ, ಶರ್ಟ್, ಪ್ಯಾಂಟ್, ಲೋವರ್, ಫ್ರಾಕ್ ಇತ್ಯಾದಿ ಕೇವಲ ರೂ. 149 /- ರಿಂದ 349/-

ರಾಜಸ್ತಾನಿ ರಾಯಲ್ಸ್ ಪ್ರಿಂಟೆಡ್ ಬೆಡ್‌ಶೀಟ್‌ಗಳು, ಪಿಲ್ಲೋಕವರ್, ಸೋಫಾಕವರ್‌ಗಳು ಭಾರಿ ರಿಯಾಯಿತಿ ಮಾರಾಟ

**ಸೇಲ್ ಕೇವಲ 4 ದಿನಗಳು ಮಾತ್ರ**
2 ಶನಿ 3 ಭಾನು 4 ಸೋಮ 5 ಮಂಗಳ ಮಾರ್ಚ್ 2024
ಬೆಳಿಗ್ಗೆ 10 ರಿಂದ ರಾತ್ರಿ 10 ರವರೆಗೆ ಊಟದ ವಿರಾಮವಿಲ್ಲ

*T & C Apply

ಉಚಿತ ಪ್ರವೇಶ ಪಾರ್ಕಿಂಗ್
All Major Debit / Credit Cards.
Google Pay, Phon ePe Accepted

**ಹೋಟೆಲ್ ಸದರ್ನ್ ಸ್ಟಾರ್**
(Full AC Hall)
3993/23, ಶ್ಯಾಮನೂರ ರಸ್ತೆ, ಎಸ್.ಎಸ್. ಲೇಔಟ್, ಎ.ಬ್ಲಾಕ್, ಲಕ್ಷ್ಮೀ ಫ್ಲೋರ್‌ಮಿಲ್ ಹತ್ತಿರ, ದಾವಣಗೆರೆ.

Venue : **HOTEL SOUTHERN STAR**
3993/23, Shamanur Road, S.S. Layout, A. Block, Near Lakshmi Flour Mill, Davanagere.







ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ
ನೂತನ ಅಧ್ಯಕ್ಷರಾಗಿ
ನೇಮಕಗೊಂಡಿರುವ ಕಾಂಗ್ರೆಸ್ ಪಕ್ಷದ
ಹಿರಿಯ ಮುಖಂಡರಾದ

**ಸನ್ಮಾನ್ಯ ಶ್ರೀ ಅಸಗೋಡು ಜಯಸಿಂಹ ಅವರಿಗೆ**

**ಹಾರ್ದಿಕ ಅಭಿನಂದನೆಗಳು**



**ಷಂಷೀರ್ ಅಹಮ್ಮದ್**
ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಸಮಿತಿ ಜಗಳೂರು.

**ಪಿ.ಎಸ್. ಸುರೇಶ್‌ಗೌಡ**
ಮಾಜಿ ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಸಮಿತಿ, ಜಗಳೂರು.

**ಜೆ.ವಿ. ಸುಧೀರ್**
ಪ್ರಥಮ ದರ್ಜೆ ಗುತ್ತಿಗೆದಾರರು, ಜಗಳೂರು.

**ಕೆ.ಪಿ. ಪಾಲಯ್ಯ**
ರಾಜ್ಯಾಧ್ಯಕ್ಷರು, ಕೆಪಿಸಿಸಿ ಎಸ್‌ಟಿ ವಿಭಾಗ